

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 | Issue : 57 | Tuesday 05-11-2024 | E-mail : maruti.b.hosamani76@gmail.com | Page: 4 | Price : Rs. 1/-


## ಬಣಕಾರ್ ಮೂಗಪ್ಪ ಹಿರೇ ಹೆಗ್ಡಾಳ್ ಇವರಿಗೆ ಜಿಲ್ಲಾ ಮಟ್ಟದ-ರಾಜ್ಯೋತ್ಸವ ಪ್ರಶಸ್ತಿ ಗರಿ



**ಸಿಹಿ ಕಹಿ ಸುದ್ದಿ**

**ಹಿರೇ ಹೆಗ್ಡಾಳ್ :** ವಿಜಯನಗರ ಜಿಲ್ಲೆ ಕೂಡ್ಲಿಗಿ ತಾಲೂಕಿನ ಹಿರೇ ಹೆಗ್ಡಾಳ್ ಗ್ರಾಮದ ಬಣಕಾರ್ ಮೂಗಪ್ಪಗೆ ರಂಗಭೂಮಿ ಕಲಾವಿದರು ಇವರಿಗೆ ಜಿಲ್ಲಾ ಆಡಳಿತ ಜಿಲ್ಲಾ ಪಂಚಾಯತಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವಿಜಯನಗರ ಜಿಲ್ಲೆ ಹಾಗೂ ನಗರ ಸಭೆ ಹೊಸಪೇಟೆ ಇವರ ಸಂಯುಕ್ತ ಆಶ್ರಯದಲ್ಲಿ ನಡೆದ ಕರ್ನಾಟಕ ರಾಜ್ಯೋತ್ಸವ 2024, 69 ನೇ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ ಬಣಕಾರ್ ಮೂಗಪ್ಪನವರು ರಂಗಭೂಮಿ ಕಲಾವಿದರು ಹಾಗೂ ಕಲಾ ಭಾರತಿ ಕಲಾ ಸಂಘವನ್ನು ಸ್ಥಾಪಿಸಿ ರಂಗ ಕಲೆಯಲ್ಲಿ ಹಲವಾರು ವೈವಿಧ್ಯಮಯ ನಾಟಕಗಳನ್ನು ವಿಭಿನ್ನ ಪಾತ್ರದಗಳಲ್ಲಿ ಮನೋಜ್ಞವಾಗಿ ಅಭಿನಯಿಸಿ ಲೀಲಾ ಜಾಲವಾಗಿ ನಟನೆ ಮಾಡಿ ವಿವಿಧ ಪಾತ್ರಗಳಿಗೆ ಜೀವ ತುಂಬಿ ರಂಗ ಕಲೆಯನ್ನು ಪೋಷಿಸುತ್ತಿರುವ ಅಪ್ರತಿಮ ನೈಜ ಕಲಾ ಪ್ರತಿಭೆಗೆ ಇಂದು 69 ನೇ. ಕರ್ನಾಟಕ ರಾಜ್ಯೋತ್ಸವ ಪ್ರಯುಕ್ತ ವಿಜಯನಗರ ಜಿಲ್ಲಾ ಆಡಳಿತ ಜಿಲ್ಲಾ ಮಟ್ಟದ ರಾಜ್ಯೋತ್ಸವ ಪ್ರಶಸ್ತಿಗೆ ನೀಡಿ ಗೌರವಿಸಿದರು. ಈ ಸಂದರ್ಭದಲ್ಲಿ ಬಿ.ಜೆಡ್ ಜಮೀರ್ ಅಹ್ಮದ್ ಖಾನ್. ಮಾನ್ಯ ವಸತಿ ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸಚಿವರು ಕರ್ನಾಟಕ ಸರಕಾರ ಹಾಗೂ ವಿಜಯನಗರ ಮತ್ತು ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರು ಕಾರ್ಯಕ್ರಮದ ಅಧ್ಯಕ್ಷತೆ ಮಾನ್ಯ ಶಾಸಕರು ಎಚ್.ಆರ್ ಗವಿಯಪ್ಪ ವಿಜಯನಗರ ಕ್ಷೇತ್ರ ಎಂ.ಎಸ್ ದಿವಾಕರ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ವಿಜಯನಗರ ಜಿಲ್ಲೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು ಸಿದ್ದಲಿಂಗಪ್ಪ ರಂಗಣ್ಣನವರ ಹಾಗೂ ಎಲ್ಲಾ ವರ್ಗದ ಅಧಿಕಾರಿಗಳು ಇತರರು ಇದ್ದರು. ಈ ಸಂದರ್ಭದಲ್ಲಿ ಬಣಕಾರ್ ಮೂಗಪ್ಪ ಜಿಲ್ಲಾ ಮಟ್ಟದ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಭಾಜನ ರಾಗಿರುವ ಇವರಿಗೆ ಜನಪ್ರಿಯ ಶಾಸಕರಾದ ಕೂಡ್ಲಿಗಿ ವಿಧಾನ ಸಭಾ ಕ್ಷೇತ್ರ ಎನ್.ಟಿ ಶ್ರೀನಿವಾಸ್ ರವರು ಹಾಗೂ ಕೂಡ್ಲಿಗಿ ತಾಲೂಕು ಕಲಾಭಿಮಾನಿಗಳು ಪ್ರೋತ್ಸಾಹಕರು ರೈತಾಪಿ ವರ್ಗದವರು ಕನ್ನಡಪರ ಹೋರಾಟಗಾರರು ಅಭಿನಂದನೆ ತಿಳಿಸಿದರು.

**ಹೋಬಳಿ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಕೆ.ಎಸ್.ವೀರೇಶ್.ಕೆ.ಹೊಸಹಳ್ಳಿ**

## ಕರ್ನಾಟಕ ಪತ್ರಕರ್ತರ ಸಂಘ ಹಾಗೂ ಭಜಂತ್ರಿ ಸಮಾಜದಿಂದ ಅಭಿನಂದನಾ ಸಮಾರಂಭ



**ಸಿಹಿ ಕಹಿ ಸುದ್ದಿ**

**ಗೂಡುರು :** ಪ್ರಶಸ್ತಿಗಳನ್ನು ಪಡೆಯುವುದರಿಂದ ನಿಮ್ಮ ಸಾಮಾಜಿಕ ಜವಾಬ್ದಾರಿ ಇನ್ಮುಂದೆ ತುಂಬಾ ಹೆಚ್ಚಾಗಿದೆ, ಸಾಮಾಜಿಕ ರಂಗದಲ್ಲಿ ನೀವು ಇತರರಿಗೆ ಮಾದರಿಯಾಗಿದ್ದೀರಿ, ತಾಲೂಕು ಪ್ರಶಸ್ತಿ ಪಡೆದ ನೀವು ಮುಂದಿನ ನಿಮ್ಮ ಪ್ರಾಮಾಣಿಕ ಸೇವೆಯ ಮೂಲಕ ರಾಜ್ಯ ಮಟ್ಟದ ಪ್ರಶಸ್ತಿಗಳು ದೊರೆಯುವಂತಾಗಲಿ ಎಂದು ಕರ್ನಾಟಕ ಪತ್ರಕರ್ತರ ಸಂಘದ ಜಿಲ್ಲಾ ಅಧ್ಯಕ್ಷ ಡಿ.ಬಿ ವಿಜಯಶಂಕರ್ ಗ್ರಾಮದ ಪ್ರವಾಸಿ ಮಂದಿರದಲ್ಲಿ ತಾಲೂಕ ಮಟ್ಟದ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನಾ ಸಮಾರಂಭ ಉದ್ದೇಶಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಪುರಸ್ಕೃತರಿಗೆ ಸನ್ಮಾನ ಮಾಡಿ ಮಾತನಾಡಿದ ಅಮೀನಗಡ ಠಾಣಾ ಅಧಿಕಾರಿ ಪಿ.ಎಸ್.ಐ ಜ್ಯೋತಿ ವಾಲಿಕಾರ ಅವರು ನಮ್ಮ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಈ ತರಹದ ಸಾಧಕರು ಇದ್ದಾರೆ. ಎಂಬುದು ನಮಗೆ ಹೆಮ್ಮೆ ಎನಿಸಿದೆ. ಇಂದು ತಾಲೂಕು ಮಟ್ಟದ ಪ್ರಶಸ್ತಿ ಪಡೆದ ನೀವು ಮುಂದಿನ ದಿನ ಮಾನದಲ್ಲಿ ಜಿಲ್ಲಾ ಹಾಗೂ ರಾಜ್ಯ ಮಟ್ಟದ ಪ್ರಶಸ್ತಿ ಪಡೆದು ಗ್ರಾಮದ ಕೀರ್ತಿಯನ್ನು ಹೆಚ್ಚಿಸಿ ಇಡಿ ಸಮಾಜಕ್ಕೆ ಮಾದರಿಯಾಗಿ ಎಂದು ಶುಭ ಕೋರಿದರು. ನಂತರ ಸಂಗಣ್ಣ ಹಂಡಿ, ಮಲ್ಲಯ್ಯ ವಸ್ತ್ರದ, ತೋಟ್ಲಪ್ಪ ತೋಟ್ಲಪ್ಪನವರ ,ಶಶಿಕಾಂತ ಭಜಂತ್ರಿ ಸಾಧಕರಿಗೆ ಅಭಿನಂದನೆ ಸಲ್ಲಿಸಿ ಇವರ ಕಾರ್ಯಕ್ಷಮತೆ ಬಗ್ಗೆ ಕೊಂಡಾಡಿ ಸಮಾಜಕ್ಕೆ ಮಾದರಿಯಾಗಿದ್ದಾರೆ ಮುಂದಿನ ಸಾಧನೆಗೆ ಹೆಜ್ಜೆ ಇಟ್ಟು ರಾಜ್ಯ ಮಟ್ಟದಲ್ಲಿ ಸೇವೆ ಗುರುತಿಸುವಂತಾಗಲಿ ಎಂದು ಶುಭ ಹಾರೈಸಿದರು.

ಗ್ರಾಮದ ಶಹನಾಯಿ ವಾದಕರಾದ ರಾಮಣ್ಣ ಭೀಮಪ್ಪ ಭಜಂತ್ರಿ, ಪಶು ವೈದ್ಯಕೀಯ ಪರೀವಿಕ್ಷಕರಾದ ಗುರುಸ್ವಾಮಿ ಜಿ ಬಿಲ್ಲೂರ, ಪತ್ರಕರ್ತ ಮಾರುತಿ ಭಜಂತ್ರಿ, ಶಿಕ್ಷಕರಾದ ಅಬೂಬಕರ ವಾಲಿಕಾರ, ಇವರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದ ಕಾರಣ ಬಾಗಲಕೋಟೆಯ ಕರ್ನಾಟಕ ಪತ್ರಕರ್ತರ ಸಂಘ ಹಾಗೂ ಸೂಳೇಭಾವಿಯ ಭಜಂತ್ರಿ ಸಮಾಜದ ಆಶ್ರಯದಲ್ಲಿ ಸರಳ ಅಭಿನಂದನಾ ಕಾರ್ಯಕ್ರಮದಲ್ಲಿ ಇವರನ್ನು ಗ್ರಾಮದ ಪ್ರಮುಖರಾದ ಮಲ್ಲಯ್ಯ ವಸ್ತ್ರದ ಮಾಜಿ ಏಪಿಈ ಹಾಲು ಒಕ್ಕೂಟದ ಅಧ್ಯಕ್ಷರಾದ ಸಂಗಣ್ಣ ಹಂಡಿ, ಹಾಗೂ ತೋಟ್ಲಪ್ಪನವರ, ಶ್ರೀಶೈಲಪ್ಪ ಭಜಂತ್ರಿ, ಶಶಿಕಾಂತ ಭಜಂತ್ರಿ, ಯಮನಪ್ಪ ಘ ಭಜಂತ್ರಿ, ಹನಮಂತ ಹಿರೇಮನಿ, ಶರಣಪ್ಪ ಭಜಂತ್ರಿ, ರಫೀಕ ಇಟಗಿ, ದುರಗಪ್ಪ ಭಜಂತ್ರಿ, ಬೊಮ್ಮಣ್ಣ ಭಜಂತ್ರಿ, ಯಮನೂರ ನಿ. ಭಜಂತ್ರಿ, ಅನೇಕ ಪ್ರಮುಖರು ಉಪಸ್ಥಿತರಿದ್ದರು.

## ‘ಪ್ರಾಮಾಣಿಕತೆಯಿಂದ ಬದುಕಿಗೆ ನೆಮ್ಮದಿ’



**ಬಾಗಲಕೋಟ :** ಶ್ರದ್ಧೆ ಹಾಗೂ ಪ್ರಾಮಾಣಿಕತೆಯಿಂದ ಕಾರ್ಯ ನಿರ್ವಹಿಸಿದಲ್ಲಿ ಅದು ಬದುಕಿನಲ್ಲಿ ನೆಮ್ಮದಿಯನ್ನು ತರಬಲ್ಲದು ಎಂದು ಪ್ರಾಚಾರ್ಯ ಶ್ರೀನಿವಾಸ ನರಗುಂದ ಹೇಳಿದರು.

ಇಲ್ಲಿನ ವಿದ್ಯಾ ಪ್ರಸಾರಕ ಮಂಡಳದ ಎಸ್.ಆರ್.ನರಸಾಪೂರ ಕಲಾ ಮತ್ತು ಎಂ.ಬಿ.ಶಿರೂರ ವಾಣಿಜ್ಯ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಹಾಗೂ ಆಂತರಿಕ ಗುಣಮಟ್ಟ ಭರವಸೆ ಕೋಶ ಮಂಗಳವಾರ ಆಯೋಜಿಸಿದ್ದ ಭ್ರಷ್ಟಾಚಾರ ವಿರುದ್ಧದ ಜಾಗೃತಿ ಅರಿವು ಸಪ್ತಾಹ ಕಾರ್ಯಕ್ರಮದಲ್ಲಿ ಅವರು ಮಾತಾಡಿದರು.

ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರವನ್ನುಪಡೆದರೆಭಾವೀಜೀವನದಲ್ಲಿ ಪ್ರಾಮಾಣಿಕತೆಯಂತಹ ಹಲವು ಜೀವನದ ಮೌಲ್ಯಗಳನ್ನು ಬೆಳೆಸಿಕೊಳ್ಳಬಹುದು ಎಂದರು.

ಭ್ರಷ್ಟಾಚಾರ ಒಂದು ಸಾಮಾಜಿಕ ಪಿಡುಗು ಅದರಿಂದ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಹಿನ್ನಡೆಯಾಗುತ್ತದೆ, ಆದ್ದ-ರಿಂದ ಸಂಘಟಿತ ಪ್ರಯತ್ನದಿಂದ ಅದರ ನಿರ್ಮೂಲನೆಗೆ ಯುವಕರು ಕೈಜೋಡಿಸಬೇಕು.

ಎಲ್ಲವನ್ನೂ ಕಾನೂನು ಒಂದರಿಂದಲೇ ಬಗೆಹರಿಸಲಾಗದು. ಮನ ಪರಿವರ್ತನೆಯಿಂದ ಹಲವು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದಾಗಿದೆ. ಈ ದಿಶೆಯಲ್ಲಿ ವಿದ್ಯಾರ್ಥಿಗಳು ಸಕಾರಾತ್ಮಕ ಮನೋಭಾವವನ್ನು ಬೆಳೆಸಿಕೊಳ್ಳಬೇಕು ಎಂದರು.

ಎನ್ಎಸ್ಎಸ್ ಅಧಿಕಾರಿ ನಾಗರಾಜ ಹಸಬಿ ಸ್ವಾಗತಿಸಿ, ಪ್ರತಿಜ್ಞಾವಿಧಿ ಬೋಧಿಸಿದರು ಉಪನ್ಯಾಸಕಿ ಶ್ವೇತಾ ಕುಲಕರ್ಣಿ ನಿರೂಪಿಸಿದರು.

ಆಂತರಿಕ ಗುಣಮಟ್ಟ ಭರವಸೆ ಕೋಶದ ಸಂಯೋಜಕ ಎಚ್ ಎಸ್ ಗಿಡಗಂಟಿ ವಂದಿಸಿದರು.

ಚಿತ್ರ ತಲೆ ಬರಹ : ಕಾರ್ಯಕ್ರಮದಲ್ಲಿ ಪ್ರತಿಜ್ಞಾವಿಧಿ ಬೋಧಿಸಲಾಯಿತು. ಪ್ರಾಚಾರ್ಯ ಶ್ರೀನಿವಾಸ ನರಗುಂದ, ಎಚ್ ಎಸ್ ಗಿಡಗಂಟಿ, ಎನ್ ಬಿ ಹಸಬಿ ಇದ್ದರು.

## ದೇಸಿ ಕ್ರೀಡೆಗಳನ್ನು ಪ್ರೋತ್ಸಾಹಿಸಿ



**ರಬಕವಿ-ಬನಹಟ್ಟಿ :** ಇಂದಿನ ದಿನಗಳಲ್ಲಿ ನಮ್ಮಿಂದ ಮಾಯವಾಗುತ್ತಿರುವ ದೇಸಿ ಕ್ರೀಡೆಗಳನ್ನು ಪ್ರತಿಯೊಬ್ಬರೂ ಪ್ರೋತ್ಸಾಹಿಸಬೇಕು. ನಮ್ಮ ಮುಂದಿನ ಪೀಳಿಗೆಗೆ ದೇಸಿ ಕ್ರೀಡೆಗಳನ್ನು ಪರಿಚಯಿಸುವುದು, ಉಳಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಜಗದಾಳ ಗ್ರಾಮದ ಮುಖಂಡ ಶೇಖರ ನೀಲಕಂಠ ತಿಳಿಸಿದರು.

ಅವರು ಸೋಮವಾರ ಸಮೀಪದ ಜಗದಾಳ ಗ್ರಾಮದಲ್ಲಿ ಬ್ರಹ್ಮ ದೇವರ ಜಾತ್ರೆಯ ಅಂಗವಾಗಿ ನಡೆದ ಅಂತರರಾಜ್ಯ ಮಟ್ಟದ ಹೊನಲು ಬೆಳಕಿನ ಪಗಡೆ ಪಂದ್ಯಾವಳಿಯ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

ಬ್ರಹ್ಮ ದೇವರ ಜಾತ್ರೆಯ ಸಂದರ್ಭದಲ್ಲಿ ಮೂರು ದಶಕಗಳಿಂದ ಪಗಡೆ ಪಂದ್ಯಾವಳಿಯನ್ನು ಹಮ್ಮಿಕೊಳ್ಳುತ್ತ ಬಂದಿದ್ದೇವೆ. ಆರಂಭದಲ್ಲಿ ನೂರಕ್ಕೂ ಹೆಚ್ಚು ತಂಡಗಳು ಭಾಗವಹಿಸುತ್ತಿದ್ದವು. ಬೇರೆ ಕಡೆಯಿಂದ ಆಗಮಿಸುವ ತಂಡಗಳಿಗೆ ವಸತಿ ಮತ್ತು ಊಟದ ವ್ಯವಸ್ಥೆಯನ್ನು ಮಾಡಲಾಗುತ್ತದೆ ಎಂದು ಶೇಖರ ನೀಲಕಂಠ ತಿಳಿಸಿದರು.

ಬಸಲಿಂಗಪ್ಪ ಕಚ್ಚು ಮತ್ತು ಸಿದ್ರಾಮಪ್ಪ ಕಚ್ಚು ಪಗಡೆ ಪಂದ್ಯಾವಳಿಗೆ ಚಾಲನೆ ನೀಡಿದರು.

ಗ್ರಾಮದ ಜಡಯ್ಯ ಹಿರೇಮಠ ಮತ್ತು ಬಸಯ್ಯ ಕಾಡದೇವರಮಠ ಸಾನಿಧ್ಯ ವಹಿಸಿದ್ದರು. ಹನಮಂತಗೌಡ ಪಾಟೀಲ, ಹೊನ್ನಪ್ಪ ಕುಳ್ಳೊಳ್ಳಿ, ಕಾಡಪ್ಪ ಕಬಾಡಗಿ, ಉಳ್ಳಾಗಡ್ಡಿ, ಮಹಾನಿಂಗ ಚಿಂಚಲಿ, ಶಿವಾನಂದ ಕಚ್ಚು, ಸುಭಾಸ ಉಳ್ಳಾಗಡ್ಡಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಐವತ್ತಕ್ಕೂ ಹೆಚ್ಚು ತಂಡಗಳ ಭಾಗಿ; ಕರ್ನಾಟಕ ಮತ್ತು ಮಹಾರಾಷ್ಟ್ರ ಸೇರಿದಂತೆ ಐವತ್ತಕ್ಕೂ ಹೆಚ್ಚು ತಂಡಗಳು ಭಾಗವಹಿಸಿದ್ದವು. ಮೂರು ದಿನಗಳ ಕಾಲ ಪಗಡೆ ಪಂದ್ಯಾವಳಿಗಳು ನಡೆಯಲಿದ್ದು, ಜೊತೆಗೆ ಚೆಸ್, ಬ್ಯಾಕ್ ಹ್ಯಾಂಡ್ ಸೈಕಲ್ ಸ್ಪರ್ಧೆ, ಓಟದ ಸ್ಪರ್ಧೆ ಮತ್ತು ಜಂಗಿ ನಿಕಾಲಿ ಕುಸ್ತಿಗಳನ್ನು ಈ ಸಂದರ್ಭದಲ್ಲಿ ಹಮ್ಮಿಕೊಳ್ಳಲಾಗಿದೆ.

## ರೈತರ ಬದುಕಿನ ರೊಟ್ಟಿಯನ್ನು ಕಾಂಗ್ರೆಸ್ ಕಸಿದುಕೊಳ್ಳುತ್ತಿದೆ: ಶಾಸಕ ಸಿದ್ದು ಸವದಿ

### ತೇರದಾಳದ 420 ಎಕರೆಯ 110 ಜನ ರೈತರಿಗೆ ನೋಟೀಸ್ । ವಕ್ಫ್ ಬೋರ್ಡ್ ರದ್ದುಗೊಳಿಸಲು ಆಗ್ರಹ । ಒಂದು ಗುಂಟೆಯನ್ನೂ ಬಿಟ್ಟುಕೊಡುವುದಿಲ್ಲ

**ರಬಕವಿ-ಬನಹಟ್ಟಿ:**ಮುಸ್ಲಿಂಸಮುದಾಯದ ಮತಗಳನ್ನು ಪಡೆಯುವ ಲಾಲಸೆಯಲ್ಲಿ ಕಾಂಗ್ರೆಸ್ ಸರ್ಕಾರ ತಲೆತಲಾಂತರದಿಂದ ಉಳುಮೆ ಮಾಡುತ್ತಿದ್ದ ರೈತರ ಜಮೀನನ್ನು ವಶಪಡಿಸಿಕೊಂಡು ಅವರ ಬದುಕಿನ ರೊಟ್ಟಿಯನ್ನು ಕಸಿದುಕೊಳ್ಳುವ ನೀಚತನಕ್ಕಿಳಿದಿದೆ. ತಾಲ್ಲೂಕಿನಲ್ಲಿಯ ಒಂದು ಗುಂಟೆಯನ್ನೂ ಬಿಟ್ಟು ಕೊಡುವುದಿಲ್ಲ. ನಾವು ರೈತರ ಬೆಂಬಲವಾಗಿ ನಿಂತುಕೊಳ್ಳುತ್ತೇವೆ ಎಂದು ಶಾಸಕ ಸಿದ್ದು ಸವದಿ ತಿಳಿಸಿದರು.



ಮಂಗಳವಾರ ಇಲ್ಲಿನ ನಿರೀಕ್ಷಣಾ ಮಂದಿರದಲ್ಲಿ ನಡೆದ ರೈತರ ಸಭೆಯಲ್ಲಿ ಅವರು ಮಾತನಾಡಿದರು.

ಸರ್ಕಾರ, ಸಚಿವರು ಹಾಗೂ ಅಧಿಕಾರಿಗಳು ಯಾವುದೇ ರೈತರಿಗೆ ನೊಟೀಸ್ ನೀಡಿಲ್ಲ ಎಂದು ಹೇಳುತ್ತಿದ್ದರೂ, ತೇರದಾಳದ 420 ಎಕರೆಯ 110 ರೈತರಿಗೆ ನೋಟೀಸ ನೀಡಿದೆ. ಕಾಂಗ್ರೆಸ್ ಸರ್ಕಾರ ಮತದ ರಾಜಕಾರಣಕ್ಕಾಗಿ ರೈತರಿಗೆ ದ್ರೋಹ ಮಾಡುತ್ತಿದೆ.

ತೇರದಾಳದ ನೂರಾರು ರೈತರು 2018 ರಿಂದ ಬೆಂಗಳೂರಿನ ವಕ್ಫ್ ಬೋರ್ಡಿಗೆ ತಮ್ಮ ಜಮೀನುಗಳನ್ನು ಉಳಿಸಿಕೊಳ್ಳುವುದಕ್ಕಾಗಿ ಅಲೆದಾಡುತ್ತಿವೆ. ಆದಷ್ಟು ಬೇಗನೆ ವಕ್ಫ್ ಬೋರ್ಡ್ ಮತ್ತು ಕಾನೂನನ್ನು ರದ್ದು ಮಾಡಬೇಕು. ಸರ್ಕಾರ ರೈತರ ಜಮೀನುಗಳಿಗೆ ಬೇಲಿ ಹಾಕಿ ದಿಗ್ಬಂಧನ ಹಾಕುತ್ತಿರುವುದು ಖೇದಕರ ಸಂಗತಿಯಾಗಿದೆ. ಸರ್ಕಾರ ರೈತರ ಜಮೀನುಗಳನ್ನು ವಶಪಡಿಸಿಕೊಳ್ಳಲು ಮುಂದಾದರೆ ರಕ್ತಪಾತವಾದರೂ ಚಿಂತೆಯಿಲ್ಲ ರೈತರ ಜಮೀನನ್ನು ಬಿಟ್ಟುಕೊಡುವುದಿಲ್ಲ ಎಂದು ಶಾಸಕ ಸಿದ್ದು ಸವದಿ ಎಚ್ಚರಿಕೆ ನೀಡಿದರು.

ವಕ್ಫ್ ಮಂಡಳಿಗೆ ಮತಗಳ ಓಲೈಕೆ: ದೇಶದಲ್ಲಿ 1990 ರ ಅವಧಿಯಲ್ಲಿ 1.06 ಲಕ್ಷ ಎಕರೆಯಷ್ಟು ಹೊಂದಿದ್ದ ಭೂಮಿಯು ಇದೀಗ 2024 ಕ್ಕೆ 9.06 ಲಕ್ಷ ಎಕರೆಯಷ್ಟು ಭೂಮಿಯನ್ನು ಹೊಂದಿದ್ದು, ಕೇವಲ ಮುಸ್ಲಿಂ ಸಮುದಾಯದ ಮತಗಳ ಓಲೈಕೆಗಾಗಿ ಕಾಂಗ್ರೆಸ್ ನೀಚ ಕೆಲಸಕ್ಕಿಳಿದು ರೈತರ ನ್ಯಾಯಯುತ ಜಮೀನು ಕಸಿದುಕೊಳ್ಳುವ ಸ್ವಾರ್ಥ ರಾಜಕಾರಣವನ್ನು ವಿರೋಧಿಸುತ್ತೇನೆಂದು ಸವದಿ ಕಿಡಿಕಾರಿದರು.

ತೇರದಾಳದ ರೈತ ಭೂಪಾಲ ಮಾನಗಾವಿ ಮಾತನಾಡಿ, 2018 ರಿಂದ ಬೆಂಗಳೂರಿಗೆ ಹೋಗಿ ಬರುತ್ತಿದ್ದೇವೆ. ನಮಗೆ ವಕ್ಫ್ ಬೋರ್ಡಿನಿಂದ ನೊಟೀಸು ಬಂದಿವೆ. ನಾವು ತಲೆತಲಾಂತರದಿಂದ ಉಳುಮೆಯನ್ನು ಮಾಡುತ್ತಿದ್ದೇವೆ ಎಂದು ತಿಳಿಸಿದರು.

ಶ್ರೀಶೈಲ ಬೀಳಗಿ, ಧರೆಪ್ಪ ಉಳ್ಳಾಗಡ್ಡಿ, ಸುರೇಶ ಅಕ್ಕಿವಾಟ, ಗಂಗಪ್ಪ ಉಳ್ಳಾಗಡ್ಡಿ, ಪರಶುರಾಮ ಗಾಡಿವಡ್ಡರ, ನಿಂಗಪ್ಪ ಜಕ್ಕನ್ನವರ, ನೇಮಣ್ಣ ಶೇಡಬಾಳ, ಪ್ರಭು ಬಡಿಗೇರ ಸೇರಿದಂತೆ ತೇರದಾಳ ಭಾಗದ ಅನೇಕ ರೈತರು ಭಾಗವಹಿಸಿದ್ದರು.

## ಅಥಣಿ ತಾಲೂಕಿನ ನದಿ ಇಂಗಳಗಾಂವದಲ್ಲಿ ಪರಮಜ್ಯೋತಿ ಯಾತ್ರೆ ಶ್ರೀಗಳ ಜೋಳಿಗೆಗೆ ದುಶ್ಚಟ ಹಾಕಿದ ಹಿರಿಯ ಜೀವಿ

**ತೇರದಾಳ :** ತೇರದಾಳ ಕ್ಷೇತ್ರಾಧಿಪತಿ ಅಲ್ಲಮಪ್ರಭುದೇವರ ನೂತನ ದೇವಸ್ಥಾನ ಲೋಕಾರ್ಪಣೆ ನಿಮಿತ್ತ ಪ್ರಭು ಪರಮಜ್ಯೋತಿಯೊಂದಿಗೆ ಡಾ. ಮಹಾಂತಪ್ರಭು ಶ್ರೀ ಹಾಗೂ ಗಂಗಾಧರ ದೇವರು ಕೈಗೊಂಡಿರುವ ಸದ್ಗುಣಗಳ ಧಿಕ್ಷೆ ದುಶ್ಚಟಗಳ ಭಿಕ್ಷೆ ಯಾತ್ರೆ ಮಂಗಳವಾರ ಅಥಣಿ ತಾಲೂಕಿನ ನದಿಇಂಗಳಗಾಂವ ಗ್ರಾಮದಲ್ಲಿ ನಡೆಯಿತು.



ಡಾ. ಮಹಾಂತಪ್ರಭು ಗಂಗಾಧರ ದೇವರು ಅವರ ಸಮಾಜಮುಖಿ ಕೆಲಸವನ್ನು ಮೆಚ್ಚಿಕೊಂಡು ಗ್ರಾಮದ ಹಿರಿಯ ಜೀವಿ ಅಪ್ಪಾಸಾಬ ಗಿರಮಲ್ಲನವರ ತಂಬಾಕು ಸೇವನೆಯನ್ನು ಈ ಕ್ಷಣದಿಂದ ಬಿಡುವುದಾಗಿ ಗ್ರಾಮಸ್ಥರ ಸಮ್ಮುಖದಲ್ಲಿ ಶ್ರೀಗಳ ಜೋಳಿಗೆಗೆ ಹಾಕುವ ಮೂಲಕ ಗ್ರಾಮಸ್ಥರ ಮೆಚ್ಚುಗೆಗೆ ಪಾತ್ರರಾದರು. ಡಾ. ಮಹಾಂತ ಪ್ರಭು ಶ್ರೀ ಹಾಗೂ ಗಂಗಾಧರ ದೇವರು ಮಾತನಾಡಿ, ನಾವು ಆರೋಗ್ಯದಿಂದ ಇದ್ದಾಗ ಮಾತ್ರ ನೆಮ್ಮದಿಯ ಬದುಕು ಸಾಗಿಸಬಹುದು. ನೆಮ್ಮದಿಯ ಬದುಕು ಕಂಡುಕೊಳ್ಳಲು ಸತ್ಸಂಗ, ಆಧ್ಯಾತ್ಮ ಪ್ರವಚನಗಳಂತಕ ಕಾರ್ಯಕ್ರಮಗಳಲ್ಲಿ ಭಾಗಿಯಾಗಬೇಕೆಂದು ಹೇಳಿದ ಅವರು, ತೇರದಾಳ ಅಲ್ಲಮಪ್ರಭುದೇವರ ನೂತನ ದೇವಸ್ಥಾನ ನಿಮಿತ್ತ ಕೈಗೊಂಡಿರುವ ಬಸವ ಪುರಾಣ ಪ್ರವಚನ ಕಾರ್ಯಕ್ರಮಕ್ಕೆ ಆಗಮಿಸುವಂತೆ ಗ್ರಾಮಸ್ಥರಿಗೆ ಆಹ್ವಾನ ನೀಡಿದರು. ಗ್ರಾಪಂ ಅಧ್ಯಕ್ಷೆ ಸಂಗೀತಾ ಚನಗೌಡರ ಮಾತನಾಡಿ ಕಾರ್ಯಕ್ರಮಕ್ಕೆ ಎಲ್ಲ ರೀತಿಯ ಸಹಾಯ ಸಹಕಾರ ನೀಡುವುದಾಗಿ ಭರವಸೆ ನೀಡಿದರು. ಗ್ರಾಮದ ಸಿದ್ಧಲಿಂಗ ಶ್ರೀ, ಶಂಕರ ಕುಂಬಾರ, ರಾಮಣ್ಣ ಹಿಡಕಲ್, ಸುಭಾಸ ಗಾತಾಡೆ, ನೀಲಕಂಠ ಹಿರೇಮಠ, ಪರಯ್ಯ ತೆಳಗಿನಮನಿ, ಅಲ್ಲಪ್ಪ ಮದಲಮಟ್ಟಿ, ಪ್ರಕಾಶ ಚಿಂಚಖಂಡಿ, ಮಹಾಂತಯ್ಯ ಮಠಪತಿ ಇನ್ನಿತರಿದ್ದರು.

## ಏಕಲವ್ಯ-ವೈದ್ಯಕೀಯ ಭಿತ್ತಿಚಿತ್ರ ಪ್ರದರ್ಶನ ಸ್ಪರ್ಧೆಯಲ್ಲಿ ಪ್ರಶಸ್ತಿ ಪಡೆದ ಬಿವಿವಿಎಸ್ ಹೋಮಿಯೋ ವಿದ್ಯಾರ್ಥಿಗಳಿಗೆ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಚರಂತಿಮಠರಿಂದ ಅಭಿನಂಧನೆ



**ಬಾಗಲಕೋಟೆ :** ರಾಜ್ಯ ಮಟ್ಟದ ಹೋಮಿಯೋಪಥಿಕ ವೈದ್ಯಕೀಯ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ ವೈದ್ಯಕೀಯ ಭಿತ್ತಿಚಿತ್ರ ಪ್ರದರ್ಶನ ಸ್ಪರ್ದೆಯಲ್ಲಿ ಪ್ರಶಸ್ತಿ ಪಡೆದ ವಿದ್ಯಾರ್ಥಿಗಳನ್ನು ಸಂಘದ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಚರಂತಿಮಠ ಅವರು ಅಭಿನಂದಿಸಿದರು.

ಇದೇ ಅಕ್ಟೋಬರ 24 ರಂದು ಬೆಳಗಾಂವಿಯ ಪ್ರತಿಷ್ಠಿತ ಭರತೇಶ ಹೋಮಿಯೋಪಥಿಕ ವೈದ್ಯಕೀಯ ಮಹಾವಿದ್ಯಾಲಯ ರಾಜ್ಯ ಮಟ್ಟದ ಹೋಮಿಯೋಪಥಿಕ ವೈದ್ಯಕೀಯ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ "ಹೋಮಿಯೋಪತಿಯ ಯುವ ಮನಸ್ಸಿನ ಮೂಲಕ ಮಾನಸಿಕ ಆರೋಗ್ಯವನ್ನು ಅನ್ವೇಷಿಸುವುದು "ವಿಷಯದ ಮೇಲೆ ಅರಿವು ಮೂಡಿಸಲು ಏರ್ಪಡಿಸಿದ ವೈದ್ಯಕೀಯ ಭಿತ್ತಿಚಿತ್ರ ಪ್ರದರ್ಶನ ಸ್ಪರ್ದೆಯಲ್ಲಿ ಬಾಗಲಕೋಟೆಯ ಬಿ.ವಿ.ವಿ.ಎಸ್.ಹೋಮಿಯೋಪಥಿಕ ವೈದ್ಯಕೀಯ ಮಹಾವಿದ್ಯಾಲಯದ ವಿದ್ಯಾರ್ಥಿಗಳಾದ ಸಂಧ್ಯಾ ಹಾಗೂ ಶ್ರೀಮಂತ ಸಜ್ಜನ ಕ್ರಮವಾಗಿ ಪ್ರಥಮ ಹಾಗೂ ದ್ವಿತಿಯ ಸ್ಥಾನ ಪಡೆದುಕೊಂಡು ಸಂಸ್ಥೆಗೆ ಕೀರ್ತಿ ತಂದಿದ್ದಾರೆ.

ಪ್ರಶಸ್ತಿ ವಿಜೇತರಾದ ವಿದ್ಯಾರ್ಥಿಗಳಿಗೆ ಹಾಗೂ ಮಾರ್ಗದರ್ಶನ ಮಾಡಿದ ಉಪನ್ಯಾಸಕರಾದ ಡಾ.ವಿಜಯಲಕ್ಷ್ಮಿ ಪಾಟೀಲ, ಡಾ. ಶಮಶಾದ ಅಂಕಲಗಿ, ಡಾ.ನುಸರತ, ಡಾ.ವಿನೋದ, ಡಾ.ಪವನ ಅವರನ್ನು ಸೇರಿದಂತೆ ವಿದ್ಯಾರ್ಥಿಗಳನ್ನು ಸೋಮವಾರ ಸಂಘದ ಕಛೇರಿಯಲ್ಲಿ ಬವಿವ ಸಂಘದ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಚರಂತಿಮಠ ಅವರು ಅಭಿನಂಧನೆ ಸಲ್ಲಿಸಿ ಶುಭ ಹಾರೈಸಿದರು.

ಕಾಲೇಜು ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಮಲ್ಲಿಕಾರ್ಜುನ ಸಾಸನೂರ ಹಾಗೂ ಪ್ರಾಚಾರ್ಯರಾದ ಡಾ.ಅರುಣ ಹೂಲಿ. ಡಾ.ರವಿ. ಕೋಟೆಣ್ಣವರ ಹಾಗೂ ಅಧ್ಯಾಪಕರು ಇದ್ದರು.

## ನಟರಾಜ ಹವ್ಯಾಸಿ ಕಲಾ ತಂಡದಿಂದ ಸಾಂಸ್ಕೃತಿಕ ಸಂಭ್ರಮ, ಗ್ರಾಮಸ್ಥರಿಂದ ಮೆಚ್ಚುಗೆ

# ನಶಿಸುತ್ತಿರುವ ಗ್ರಾಮೀಣ ಕಲೆಗಳನ್ನು ಉಳಿಸಿ ಬೆಳೆಸಿ–ಪಾಟೀಲ





**ಲೋಕಾಪುರ :** ನಮ್ಮ ದೇಶದ ಸಂಸ್ಕೃತಿ ಹಾಗೂ ಗ್ರಾಮೀಣ ಕಲೆಗಳನ್ನು ಉಳಿಸಿ, ಬೆಳೆಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದು ಹಿರಿಯ ನಾಗರಿಕರ ವೇದಿಕೆಯ ಅಧ್ಯಕ್ಷ ಬಸನಗೌಡ ಪಾಟೀಲ ಹೇಳಿದರು.

ಪಟ್ಟಣದಲ್ಲಿ ಶುಕ್ರವಾರ ಜಾಲಿಕಟ್ಟಿ ಬಿ.ಕೆ. ರಾಮಲಿಂಗ ಟ್ರಸ್ಟ್ ಸಭಾಭವನದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಹಾಗೂ ನಟರಾಜ ಹವ್ಯಾಸಿ ಕಲಾ ತಂಡದ ಸಹಯೋಗದಲ್ಲಿ ನಡೆದ ಸಾಂಸ್ಕೃತಿಕ ಸಂಭ್ರಮ ಕಾರ್ಯಕ್ರಮದಲ್ಲಿ ಮಾತನಾಡಿದ ಸಾಹಿತ್ಯ, ಸಂಸ್ಕೃತಿಯ ಅಭಿರುಚಿಯನ್ನು ಇಂದಿನ ಸಮಾಜಕ್ಕೆ ಪರಿಚಯಿಸುವುದರೊಂದಿಗೆ, ನಶಿಸುತ್ತಿರುವ ಜಾನಪದ ಸಂಸ್ಕೃತಿಯನ್ನು ಉಳಿಸಿ ಬೆಳೆಸಬೇಕಾಗಿದೆ. ಅವರು ಸಾಂಸ್ಕೃತಿ–ಕ ಸಂಭ್ರಮದ ಕಲಾ ಸಾಧ್ಯತೆಗಳನ್ನು ಅಸ್ವಾದಿಸುವ ಮೂಲಕ ಸಹೃದಯ ಪ್ರೇಕ್ಷಕರು ಮತ್ತಷ್ಟು ಸುಸಂಸ್ಕೃತರಾಗಿ ಬೆಳೆಯಬಹುದು, ಇಂತಹ ಕಾರ್ಯಕ್ರಮಗಳು ಮೌಲ್ಯಯುತವಾಗಿ, ಮನೋರಂಜನೆ,, ಸಮಯದ ಮಿತಿ ಮತ್ತು ಸಂಸ್ಕೃತಿಯನ್ನು ಬಿಂಬಿಸುವಂತಿರಬೇಕು ವಸ್ತು ದೃಷ್ಟಿಯಲ್ಲಿ ಸಂದೇಶದ ಸ್ಪಷ್ಟತೆಯಿದ್ದು ಸಕುಟುಂಬಿಕವಾಗಿ ನೋಡುವಂತಿದ್ದರೆ ಒಳ್ಳೆಯದು ಎಂದು ಅಭಿಪ್ರಾಯಪಟ್ಟರು.

ಮುಖ್ಯ ಶಿಕ್ಷಕ ವಿಷ್ಣು ವರ್ಚಗಲ್ ಮಾತನಾಡಿ ನಮ್ಮ ಮನಸ್ಸಿನಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಅಂದರೆ ಪೀಲ್ಮ್ ಡ್ಯಾನ್ಸ್, ಟ್ರ್ಯಾಕ್ ಹಾಕಿ ಹಾಡುವುದೇ ಮನೋರಂಜನೆ ಕಲೆ ಎಂಬ ಮಾನಸಿಕ ಸೀಮಿತತೆ ಇದೆ, ಅದರಾಚೆ ಇನ್ನೂ ಇದೆ ಎಂಬ ಜ್ಞಾನ ಇರಬೇಕು ಮತ್ತು ಎಲ್ಲಾ ಕಲೆಗಳಿಗೂ, ಕಲಾವಿದರಿಗೂ ಗೌರವ ನೀಡಬೇಕು, ಜೊತೆಗೆ ಕಾರ್ಯಕ್ರಮದ ವೇದಿಕೆ, ಪರಿಸರ, ಅನುಶಾಸನ, ಸರಿಯಾಗಿದೆಯೇ ಎಂದು ಮೊದಲೇ ತಿಳಿಯಬೇಕು ನಿರ್ಧಿಷ್ಟ ಸಮಯದ ಮಿತಿಯಲ್ಲಿ ಪ್ರೇಕ್ಷಕರಿಗೆ ಮನೋರಂಜನೆಯ ರಸದೌತಣವಾದರೆ ಕಾರ್ಯಕ್ರಮ ಸಾಥ–ರ್ಕವಾದಿತು ಎಂದರು.

ಸಾಂಸ್ಕೃತಿಕ ಸಂಭ್ರಮದಲ್ಲಿ ಭಾಗವಹಿಸಿದ ಕಲಾವಿದರು: ಸಾಂಸ್ಕೃತಿಕ ಸಂಭ್ರಮದಲ್ಲಿ ಕಲಾವಿದರು ವಿವಿಧ ಕಲೆಗಳಲ್ಲಿ ಅಮುಲ್ಯಾ ಕಾಂಬಳೆಹಾಗೂಜನನಿಕಲ್ಯಾಣಿಭರತನಾಟ್ಯ, ಸದಾಶಿವ ಬೆಣಗಿ ಸುಗಮ ಸಂಗೀತ, ನಾಗಪ್ಪ ಹವಳಖೋಡ ತತ್ವಪದ, ಲಾವಣ್ಯಾ ಹಾಗೂ ಚಂದ್ರಕಾಂತ ರಂಗಣ್ಣವರ ತಂಡದಿಂದ ಸಂಗೀತ ಗಾನ ಸುಧೆ, ಸಂತೋಷಿಮಾ ರಾಮದುರ್ಗ ಏಕಪಾತ್ರಾಭಿನಯ, ಹಣಮಂತಗೌಡ ಪಾಟೀಲ ಹಾಗೂ ಈರಣ್ಣ ಯಾದವಾಡ ತಂಡದಿಂದ ಭಜನೆ, ಪ್ರಕಾಶ ಪೀಠಕ ಏಕಪಾತ್ರಾಭಿನಯ, ಸೋಮು ಕಟ್ಟೆಣ್ಣವರ ಹಾಗೂ ಸಂಗಡಿಗರಿಂದ ಭಾವ ಸಂಗಮ, ಶಕುಂತಲಾ ಹುಲ್ಲಣ್ಣವರ ಹಾಗೂ ಸಂಗಡಿಗರಿಂದ ಭಕ್ತ ಪ್ರಹ್ಲಾದ ನಾಟಕ ಪ್ರದರ್ಶನ ನೀಡಿ ಪ್ರೇಕ್ಷಕರನ್ನು ರಂಜಿಸಿದರು.

ಕಲಾವಿದರಿಗೆ ಸನ್ಮಾನ: ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಹಿರಿಯ ಕಲಾವಿದರಾದ ಹನಮಂತಗೌಡ ಪಾಟೀಲ, ವಿಠಲಗೌಡ ಪಾಟೀಲ, ಈರಣ್ಣ ಯಾದವಾಡ, ನಿಂಗಪ್ಪ ತೆಗ್ಗಿ, ಶಾಂತವ್ವ ಮಾದರ, ಸತ್ಯವ್ವ ಮಾದರ, ರಾಮವ್ವ ಮಾದರ, ಸಂತೋಷಿಮಾ ರಾಮದುರ್ಗ, ಮಲ್ಲಿಕಾರ್ಜುನ ಬಟಕುರ್ಕಿ, ಸಂಗಮೇಶ ನೀಲಗುಂದ, ಶಮಸುದ್ದೀನ ರಾಮದುರ್ಗ, ಬಸವರಾಜ ದಂಡಿನಮಠ, ಮಲ್ಲಯ್ಯ ಸಂಬಾಳದ, ರಮೇಶ ಉಪ್ಪಾರ, ಕಲ್ಮೇಶ ನಾವ್ಹಿ, ಗೋಪಾಲ ನಾಯ್ಕರ, ಡಾ। ಲೋಕಣ್ಣ ಭಜಂತ್ರಿ, ಮಂಜುಳಾ ಕಲ್ಯಾಣಿ, ಲಕ್ಷ್ಮಣ ಮುದ್ದಾಪೂರ ಇವರಿಗೆ ನಟ–ರಾಜ ಹವ್ಯಾಸಿ ಕಲಾ ತಂಡದ ವತಿಯಿಂದ ಸನ್ಮಾನಿಸಲಾಯಿತು.

ಈ ವೇಳೆ ಹಿರಿಯ ನಾಗರಿಕ ಸೇವಾ ಸಂಘದ ಅಧ್ಯಕ್ಷ ಬಸನಗೌಡ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಲಕ್ಷಾನಟ್ಟಿ ಗ್ರಾಪಂ ಮಾಜಿ ಅಧ್ಯಕ್ಷ ಹನಮಂತಗೌಡ ಪಾಟೀಲ, ಸದಾಶಿವ ಹಗ್ಗದ, ವಿಠ್ಠಲಗೌಡ ಪಾಟೀಲ, ಭೀಮನಗೌಡ ಪಾಟೀಲ, ಯಲ್ಲಪ್ಪ ಸಂಶಿ, ಕೃಷ್ಣಪ್ಪ, ಭೂಸರೆಡ್ಡಿ, ಹಣಮಂತಗೌಡ ಪಾಟೀಲ, ವಾಲ್ಮೀಕಿ ಸಮಾಜದ ಯುವ ಧುರೀಣ ಗೋವಿಂದ ಕೌಲಗಿ, ಪುಂಡಲೀಕ ತಳವಾರ, ರಾಮಣ್ಣ ನಾಗರಾಳ, ಭೀಮಪ್ಪ ತೆಗ್ಗಿ, ದುರಗಪ್ಪ ಮಾದರ, ಗುಣಕರ ಶೆಟ್ಟಿ, ವಿಷ್ಣು ವರ್ಚಗಲ್, ಪತ್ರೆಪ್ಪ ನಂದಿ, ಭೀಮಶಿ ಭೂಸರಡ್ಡಿ, ವಿಠ್ಠಲ ಆನೆಗುದ್ದಿ, ನಟ–ರಾಜ ಹವ್ಯಾಸಿ ಕಲಾ ತಂಡದ ಅಧ್ಯಕ್ಷ ಚಂದ್ರಕಾಂತ ರಂಗಣ್ಣವರ ಹಾಗೂ ಕಲಾವಿದರು, ಗ್ರಾಮಸ್ಥರು ಇದ್ದರು. ಶಿಕ್ಷಕ ಕೆ.ಪಿ. ಯಾದವಾಡ ನಿರೂಪಿಸಿದರು.

## ಶ್ರೀದೇವಿ ಕರ್ಜಗಿ ಅವರಿಗೆ ಡಾಕ್ಟರೇಟ್



**ಇಳಕಲ್ :** ಕುಷ್ಟಗಿ ತಾಲೂಕಿನ ಹನಮನಾಳ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕಿ, ಲೇಖಕಿ ಶ್ರೀದೇವಿ ಮಹಾಂತೇಶ ಕರ್ಜಗಿ ಅವರಿಗೆ ಬೆಳಗಾವಿಯ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದವರು ಡಾಕ್ಟರೇಟ್ ಪದವಿ ಪ್ರಧಾನ ಮಾಡಿದ್ದಾರೆ.

ಶಾಸ್ತ್ರೀಯ ಭಾಷೆ ಅಧ್ಯಯನ ಸಂಸ್ಥೆಯ ಡಾ.ಹನಮಂತಪ್ಪ ಸಂಜೀವಣ್ಣನವರ ಮಾರ್ಗದರ್ಶನದಲ್ಲಿ ವೀರಶೈವ ಸಾಹಿತ್ಯ ಸಾಂಗತ್ಯ ಕವಿಗಳು ಎಂಬ ವಿಷಯದ ಮೇಲೆ ಪ್ರಬಂಧ ಮಂಡಿಸಿದಕ್ಕೆ ಬೆಳಗಾವಿ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ನೀಡಿ ಗೌರವಿಸಿದ್ದಾರೆ.

ಶ್ರೀದೇವಿ ಕರ್ಜಗಿ ಅವರನ್ನು ಹಂಪಿ ಹೇಮಕೂಟದ ಜಗದ್ಗುರು ದಯಾನಂದಪುರಿ ಮಹಾಸ್ವಾಮಿಗಳು, ಇಳಕಲ್ ಚಿತ್ತರಗಿ ಪೀಠದ ಗುರುಮಹಾಂತ ಮಹಾಸ್ವಾಮಿಗಳು ಹಾಗೂ ಅನೇಕ ಸಂಘ ಸಂಸ್ಥೆಗಳು ಅಭಿನಂದಿಸಿವೆ.

## ಅಂತರಾಷ್ಟ್ರೀಯ ವುಶು ಚಾಂಪಿಯನ್ ಶಿಪ್: ಚಿನ್ನದ ಪದಕ ವಿಜೇತೆ ಅನಿತಾ ಚವ್ಹಾಣಗೆ ರಾಜ್ಯ ವುಶು ಸಂಸ್ಥೆಯಿಂದ ಸನ್ಮಾನ

**ಬಾಗಲಕೋಟೆ :** ಅಂತರಾಷ್ಟ್ರೀಯ ವುಶು ಚಾಂಪಿಯನ್ ಶಿಪ್‌ನಲ್ಲಿ ಚಿನ್ನದ ಪದಕ ಪಡೆದ ಅನಿತಾ ಚವ್ಹಾಣಗೆ ಕರ್ನಾಟಕ ವುಶು ಸಂಸ್ಥೆಯವತಿಯಿಂದ ವುಶು ಸಂಸ್ಥೆಯ ಅಧ್ಯಕ್ಷರಾದಡಾ.ವೀರಣ್ಣಚರಂತಿಮಠಅವರುಸೋಮವಾರ ಕಛೇರಿಯಲ್ಲಿ ಸನ್ಮಾನಿಸಿ ಗೌರವಿಸಿದರು.

2024ರ ಅಕ್ಟೋಬರ ತಿಂಗಳ ದಿನಾಂಕ 17ರಿಂದ 23 ವರೆಗೆ ಜಾರ್ಜಿಯಾ ದೇಶದ ಬಾಟೂಮಿಯಲ್ಲಿ ನಡೆದ ಅಂತರಾಷ್ಟ್ರೀಯವುಶುಚಾಂಪಿಯನ್ನಶಿಪ್‌ಕ್ರೀಡಾಕೂಟದಲ್ಲಿ 15 ದೇಶಗಳಿಂದ 1500 ಕ್ಕೂ ಹೆಚ್ಚು ಕ್ರೀಡಾಪಟುಗಳು ಭಾಗಿಯಾಗಿದ್ದರು. ಭಾರತ ದೇಶದಿಂದ ಬಾಗಲಕೋಟೆಯ ಕುಮಾರಿ ಅನಿತಾ ಚವ್ಹಾಣ ಭಾಗಿಯಾಗಿ ಅತ್ಯುತ್ತಮ ಪ್ರದರ್ಶನ ನೀಡಿ ತಾವಲು ವಿಭಾಗದ ಕ್ವಾನ್ ಡಾ ದಲ್ಲಿ ಬಂಗಾರ ಪದಕ ಹಾಗೂ ನಾನ್ ಕ್ವಾನ್ ಟೈಪ್‌ದಲ್ಲಿ ಬೆಳ್ಳಿಯ ಪದಕ ಪಡೆದುಕೊಂಡು ಭಾರತ ದೇಶ ಹಾಗೂ ರಾಜ್ಯಕ್ಕೆ ಬಾಗಲಕೋಟೆ ಜಿಲ್ಲೆ ಹಾಗೂ ಕರ್ನಾಟಕ ವುಶು ಸಂಸ್ಥೆಗೆ ಕೀರ್ತಿ ತಂದಿದ್ದಾಳೆ, ಇವಳಿಗೆ ಸಂಘದ ಕಛೇರಿಯಲ್ಲಿ ರಾಜ್ಯ ವುಶು ಸಂಸ್ಥೆಯ ಅಧ್ಯಕ್ಷರಾದ ಡಾ.ವೀರಣ್ಣ ಚರಂತಿಮಠ



ಸನ್ಮಾನಿಸಿ ಶುಭ ಹಾರೈಸಿ ಮತನಾಡಿದ ಅವರು, ಕರ್ನಾಟಕ ರಾಜ್ಯ ವುಶು ಸಂಸ್ಥೆಗೆ ಹೆಮ್ಮೆಯ ವಿಷಯವಾಗಿದ್ದು, ವುಶು ಪ್ರಾರಂಭವಾಗಿ 37 ವರ್ಷವಾಗಿದೆ, ಈ ತರದ ಸಾಧನೆ ಮಾಡಿರುವುದು ಇದೆ ಪ್ರಥಮ, ಅದು ಮಹಿಳಾ ವಿಭಾಗ ಮತ್ತು ಬಾಗಲಕೋಟೆ ಜಿಲ್ಲೆಯ ಗ್ರಾಮೀಣ ಪ್ರತಿಭೆ ಸಾಧನೆ ಮಾಡಿರುವುದು ಬಾಗಲಕೋಟೆ ಜಿಲ್ಲೆಗೆ ಹೆಮ್ಮೆಯ ವಿಷಯವಾಗಿದೆ ಎಂದರು.

ಈ ಸಂದರ್ಭದಲ್ಲಿ ರಾಜ್ಯ ವುಶು ಸಂಸ್ಥೆಯ ಉಪಾಧ್ಯಕ್ಷರಾದ ಅಶೋಕ ಸಜ್ಜನ ಬೇವೂರ, ಕುಮಾರಸ್ವಾಮಿ ಹಿರೇಮಠ, ರಾಜು ನಾಯ್ಕರ, ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಅಶೋಕ ಮೋಖಾಶಿ, ಸಂಗಮೇಶ ಲಾಯದಗುಂದಿ,ಆರ್. ಎಮ್.ಹಿರೇಮಠ, ಅವಿನಾಶ ಹಿರೇಮಠ, ಸೇರಿದಂತೆ ಅನೇಕರು ಇದ್ದರು.

## ಆಸ್ತಿ ಖಾತೆ ಗಣಿಕಿಕೃತ ಕಡ್ಡಾಯ

**ತಾಳಿಕೋಟೆ :** ಸಾರ್ವಜನಿಕರ ಸಂಬಂಧಿತ ಆಸ್ತಿಗಳ ಖಾತೆಗಳನ್ನು ಗಣಕಿಕೃತಗೊಳಿಸಿಕೊಳ್ಳುವದು ಕಡ್ಡಾಯವಾಗಿದ್ದು ತಾಳಿಕೋಟೆ ಪಟ್ಟಣದ ಎಲ್ಲ ಆಸ್ತಿ ಮಾಲಿಕರು ತಮ್ಮ ತಮ್ಮ ಆಸ್ತಿಗಳ ಖಾತೆಗಳನ್ನು ಗಣಕಿಕೃತ ಮಾಡಿಸಿಕೊಳ್ಳಬೇಕೆಂದು ಪುರಸಭೆ ಮುಖ್ಯಾಧಿಕಾರಿ ಮೋಹನ್ ಜಾಧವ ಅವರು ತಿಳಿಸಿದ್ದಾರೆ.

ಸಿಟಿಎಸ್ ಆಸ್ತಿಯಾದಲ್ಲಿ ಸಿಟಿಎಸ್ ಉತಾರೆ, ಸಿಟಿಎಸ್ ನಕ್ಷೆ, ಮಾಲಿಕರ ಭಾವಚಿತ್ರ,ಮನೆಜಿಪಿಎಸ್‌ಪೋಟೊ,ಓಟರ್‌ಐಡಿಅಥವಾಪ್ಯಾನಕಾರ್ಡ, ಸನ್ 2024–25ನೇ ಸಾಲಿನ ಎಸ್‌ಎಎಸ್, ಸನ್ 2024–25ರವರೆಗೆ ಭರಣಾ ಮಾಡಿದ ನೀರಿನ ಕರ, ಅರ್ಜಿ ನಮೂನೆ, ಕಟ್ಟಡ ಪರವಾನಿಗೆ ಅಥವಾ ಪೂರ್ಣಗೊಂಡ ಪ್ರಮಾಣ ಪತ್ರ ಲಗತ್ತಿಸಬೇಕೆಂದು ಅವರು ತಿಳಿಸಿದ್ದಾರೆ. ಬಿನ್ ಶೇತ್ಕಿ ಆಸ್ತಿಯಾದಲ್ಲಿ ಎನ್‌ಎ ಆರ್ಡರ್ ಕ್ವಾಪಿ, ಕೆಜಿಪಿ ಅಥವಾ ನಕ್ಷೆ, ಖರೀದಿ ಬಾಂಡ, ಮನೆ ಅಥವಾ ಖಾಲಿ ಜಾಗೆ ಜಿಪಿಎಸ್ ಪೋಟೊ, ಮಾಲಿಕರ ಭಾವಚಿತ್ರ, ಓಟರ್ ಐಡಿ ಅಥವಾ ಪ್ಯಾನ್ ಕಾರ್ಡ, ಸನ್ 2024–25ನೇ ಸಾಲಿನ ಎಸ್‌ಎಎಸ್, ನೀರಿನ ಕರ ಭರಣಾ ಮಾಡಿದ ಚಲನ, ಅರ್ಜಿ ನಮೂನೆ, ಕಟ್ಟಡ ಪರವಾನಿಗೆ ಅಥವಾ ಪೂರ್ಣಗೊಂಡ ಪ್ರಮಾಣ ಲಗತ್ತಿಸಿ ಪುರಸಭೆಯ ಕಂದಾಯ ವಿಭಾಗದಲ್ಲಿ ಅರ್ಜಿ ಸಲ್ಲಿಸಿ ಗಣಿಕಿಕೃತ ಉತಾರೆ ಪಡೆದುಕೊಳ್ಳಬೇಕೆಂದು ಪುರಸಭೆ ಮುಖ್ಯಾಧಿಕಾರಿ ಮೋಹನ್ ಜಾಧವ ಅವರು ಪ್ರಕಟನೆ ಮೂಲಕ ಕೋರಿದ್ದಾರೆ.

## ಡೆಂಗ್ಯೂಗೆ ಯುವಕ ಪೃಥ್ವಿ ಹರಿಹರ ಬಲಿ



**ಇಳಕಲ್ :** ನಗರದಲ್ಲಿ ಡೆಂಗ್ಯೂ ಹಾವಳಿಗೆ ನಗರದ ಸರಾಫ್ ವ್ಯಾಪಾರಿ ಚಂದ್ರು ಹರಿಹರ ಅವರ ಮಗ ಪೃಥ್ವಿ (22) ವರ್ಷದ ಸುಂದರ ಯುವಕ ಬಲಿಯಾಗಿದ್ದಾನೆ.

ನಗರದಲ್ಲಿ ಡೆಂಗ್ಯೂ ಹಾವಳಿ ಹೆಚ್ಚಾಗುತ್ತಿದ್ದು ಸಾಕಷ್ಟು ಜನರು ಸರ್ಕಾರಿ ಮತ್ತು ಇನ್ನಿತರ ಆಸ್ಪತ್ರೆಗಳಲ್ಲಿ ದಾಖಲಾಗಿದ್ದಾರೆ ಎಂದು ತಿಳಿದುಬಂದಿದ್ದು ನಗರಸಭೆ ಮತ್ತು ಆರೋಗ್ಯ ಇಲಾಖೆಯವರು ಹೆಚ್ಚಿನ ಕಾಳಜಿ ವಹಿಸಿ ಡೆಂಗ್ಯೂ ತಡೆಗಟ್ಟುವಲ್ಲಿ ಕಾರ್ಯಪ್ರವೃತ್ತರಾಗಬೇಕೆಂದು ಸಾರ್ವಜನಿಕರು ಕೇಳಿಕೊಳ್ಳುತ್ತಿದ್ದಾರೆ.

## ಬಿವಿವಿ ಸಂಘದ ಗ್ರಾಮೀಣ ಅಭಿವೃದ್ಧಿ ಪ್ರತಿಷ್ಠಾನ ಮತ್ತು ಸಂಘದ ಕೊಟಕ್ ಮಹೀಂದ್ರಾ ಬ್ಯಾಂಕ್ ಆರ್‌ಸೆಟ್ ಸಂಸ್ಥೆಯ ರಜತ ಮಹೋತ್ಸವ

# ನಿರೂದ್ಯೋಗ ನಿವಾರಣೆಯಲ್ಲಿ ಆರ್‌ಸೆಟ್ ಸಂಸ್ಥೆಯಿಂದ ಉತ್ತಮ ಕಾರ್ಯ: ಗದ್ದಿಗೌಡರ

**ಬಾಗಲಕೋಟೆ :** ಆರ್‌ಸಟ್ ಸಂಸ್ಥೆ 41.000 ಸಾವಿರ ಜನರಿಗೆ ಸ್ವ ಉದ್ಯೋಗ ತರಬೇತಿ ನೀಡಿದ್ದು ಅದರಲ್ಲಿ ಶೇ.75 ರಷ್ಟು ಜನರು ಸ್ವಂತ ಉದ್ಯೋಗ ಪ್ರಾರಂಭಿಸಿ ಬೇರೆಯವರಿಗೆ ಉದ್ಯೋಗ ನೀಡುವು ಜತೆಗೆ ತಮ್ಮ ಜೀವನದ ಜತೆಗೆ ಅನೇಕರ ಜೀವನ ನಡೆಸಲು ಸಹಕಾರಿಯಾಗಿದ್ದು, ನೀರುದ್ಯೋಗ ನಿವಾರಣೆಯಲ್ಲಿ ಆರ್‌ಸೆಟ್ ಸಂಸ್ಥೆಯ ಕಾರ್ಯ ಉತ್ತಮವಾಗಿದೆ ಎಂದು ಸಂಸದ ಪಿ.ಸಿ. ಗದ್ದಿಗೌಡರ ಹೇಳಿದರು.

ಇಲ್ಲಿನ ಬಿವಿವಿ ಸಂಘದ ಬಸವೇಶ್ವರ ಇಂಜಿನಿಯ–ರಿಂಗ್ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಸಂಘದ ಗ್ರಾಮೀಣ ಅಭಿವೃದ್ಧಿ ಪ್ರತಿಷ್ಠಾನ ಮತ್ತು ಸಂಘದ ಕೊಟಕ್ ಮಹೀಂದ್ರಾ ಬ್ಯಾಂಕ್ ಆರ್‌ಸೆಟ್ ಸಂಸ್ಥೆಯ ರಜತ ಮಹೋತ್ಸವ ಕಾರ್ಯಕ್ರಮವನ್ನು ಉಧ್ಘಾಟಿಸಿ ಮಾತನಾಡಿದರು

ಕೇಂದ್ರ ಎಂಎಸ್‌ಎಂಇ ಮೂಲಕ ಯುವಕರಿಗೆ ಅವರ ಬಯಸುವ ಕ್ಷೇತ್ರದಲ್ಲಿ ತರಬೇತಿ ನೀಡಿ, ಅವರು ಸ್ವಂತ ಉದ್ಯಮ ಪ್ರಾರಂಭಿಸುವಂತೆ ಕೇಂದ್ರ ಸರಕಾರ ಕ್ರಮ ಕೈಗೊಂಡಿದೆ. ಯುವಕರು ಇದರ ಲಾಭ ಪಡೆದು ಉದ್ಯಮ ಪ್ರಾರಂಭಿಸಿ, ಬೇರೆಯವರಿಗೆ ಉದ್ಯೋಗ ನೀಡುವಂತಾಗಬೇಕು.ಆ ನಿಟ್ಟಿನಲ್ಲಿ ಆರ್‌ಸೆಟ್ ಅಂತಹ ಸಂಸ್ಥೆಗಳನ್ನು ಪ್ರಾರಂಭಿಸುವುದರಿಂದ ದೇಶದಲ್ಲಿ ನಿರುದ್ಯೋಗದ ಸಮಸ್ಯೆಯನ್ನು ಕಡಿಮೆ ಮಾಡಬಹುದು. ಹಾಗೂ ದೇಶದ ಆರ್ಥಿಕತೆ ಕೂಡ ಸುಧಾರಿಸುತ್ತದೆ. ಹೆಚ್ಚಿನ ಉದ್ಯಮ ಸ್ಥಾಪಿತವಾದ ದೇಶಗಳು ಆರ್ಥಿಕವಾಗಿ ಮುಂದುವರೆಯಲು ಸಾಧ್ಯ ಎಂದರು.

ಬೆಂಗಳೂರಿನ ಕೊಟಕ್ ಮಹೀಂದ್ರ ಬ್ಯಾಂಕ್‌ನ ಎಸ್.ಇ.ನಟರಾಜ್ ಮಾತನಾಡಿ, ಆರ್‌ಸೆಟ್ ಸಂಸ್ಥೆಯಲ್ಲಿ ಇಲ್ಲಿಯವರೆಗೆ ಅಂದಾಜು 52 ಲಕ್ಷ ಜನರು ವಿವಿಧ ತರಬೇತಿಗಳನ್ನು ಪಡೆದಿದ್ದಾರೆ. ಅದರಲ್ಲಿ ಶೇ.70 ರಷ್ಟು ಜನರು ಸ್ವಂತ ಉದ್ಯಮ ಆರಂಭಿಸಿದ್ದಾರೆ. ಅದರಲ್ಲೂ ಹೆಚ್ಚಿನವರು ಮಹಿಳೆಯರು. ಹಿಂದಿನ ದಿನಗಳಲ್ಲಿ ಉದ್ಯೋಗಂ ಪುರುಷ ಲಕ್ಷಣಂ ಎನ್ನಲಾಗುತ್ತಿತ್ತು. ಆದರೆ, ಅದು ಈಗ ಬದಲಾಗಿ ಉದ್ಯೋಗಂ ಮನುಷ್ಯ ಲಕ್ಷಣಂ ಆಗಿದೆ ಎಂದರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಬಿವಿವಿ ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ ಮಾತನಾಡಿ ನರ್ಸರಿಯಿಂದ ಸ್ನಾತಕೋತ್ತರದವರೆಗೆ ಎಲ್ಲ ವಿಭಾಗಗಳಲ್ಲೂ ಶಿಕ್ಷಣ ನೀಡುವ ಜತೆಗೆ ಉದ್ಯೋಗಾಧಾರಿತ ಶಿಕ್ಷಣ ನೀಡುವ ಉದ್ದೇಶದಿಂದ ಬಿವಿವಿ ಸಂಘದಿಂದ ಆರ್‌ಸೆಟ್ ಸಂಸ್ಥೆ ಪ್ರಾರಂಭಿಸಲಾಯಿತು, ಇಲ್ಲಿ ತರಬೇತಿ ಪಡೆದ 41,000 ಜನರಲ್ಲಿ ಶೇ.75 ರಷ್ಟು ಜನರು ಸ್ವಂತ ಉದ್ಯೋಗವನ್ನು ಪ್ರಾರಂಭಿಸಿ ಬೇರೆಯವರಿಗೆ ಉದ್ಯೋಗ ನೀಡುವ ಜತೆಗೆ ತಮ್ಮ ಜೀವನದ ಜತೆಗೆ ಅನೇಕರ ಜೀವನ ನಡೆಸಲು ಸಹಕಾರಿಯಾಗಿದ್ದಾರೆ,

ಕೇಂದ್ರ ಸರಕಾರದ ಪಿಎಂಇಜಿಪಿ ಹಾಗೂ ವಿಶ್ವಕರ್ಮ ಯೋಜನೆ ಸೇರಿದಂತೆ ಕೇಂದ್ರ ಸರಕಾರದ ವಿವಿಧ ಯೋಜನೆಗಳಡಿ ನಮ್ಮ ಆರ್‌ಸೆಟ್ ಸಂಸ್ಥೆಯಲ್ಲಿ ತರಬೇತಿ ನೀಡಲಾಗುತ್ತಿದೆ. ಇಂದಿನ ದಿನಗಳಲ್ಲಿ ಕೌಶಲಯುಕ್ತ ಚಾಲಕರು, ಅಡಿಗೆ ಮಾಡುವವರು ಹಾಗೂ ಸೆಕ್ಯೂರಿಟಿ ಗಾರ್ಡ್‌ಗಳ ಹೆಚ್ಚಿನ ಅವಶ್ಯಕತೆ ಇದ್ದು, ಈ ಬಗ್ಗೆ ತರಬೇತಿ ನೀಡುವಲ್ಲಿ ಸಂಸ್ಥೆ ಕಾರ್ಯಕೈಗೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ಬಿವಿವಿ ಸಂಘದ ಕೊಟಕ್ ಮಹೀಂದ್ರಾ ಬ್ಯಾಂಕ್ ಆರ್‌ಸೆಟ್ ಸಂಸ್ಥೆಯ ವೆಬ್‌ಸೈಟ್‌ನ್ನು ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಬಿಡುಗಡೆಗೊಳಿಸಿದರು. ಉದಯೋನ್ಮುಖ ಉದ್ದಿಮೆದಾರರ ಯಶೋಗಾಥೆಗಳ ಪುಸ್ತಕವನ್ನು ಸಂಸದ ಪಿ.ಸಿ.ಗದ್ದಿಗೌಡರ ಬಿಡುಗಡೆಗೊಳಿಸಿದರು.

ಸನ್ಮಾನ: ಸಂಘದ ಆರ್‌ಸೆಟ್‌ನಲ್ಲಿ ತರಬೇತಿ ಪಡೆದು, ಸ್ವಂತ ಉದ್ಯಮ ಪ್ರಾರಂಭಿಸಿದವರನ್ನು ಹಾಗೂ ಆರ್‌ಸೆಟ್ ಸಂಸ್ಥೆಯ ಇಲ್ಲಿಯವರೆಗಿನ ಮುಖ್ಯಸ್ಥರನ್ನು ಸತ್ಕರಿಸಲಾಯಿತು. ವೇದಿಕೆಮೆಲೆ ಮುಂಬೈನ್ ಕೊಟಕ ಮಹೀಂದ್ರಾ ಬ್ಯಾಂಕ್‌ನ ನಿಶಾದ ದಾತರ್, ಬೆಂಗಳೂ–ರಿನ ಕೋಟಕ್ ಮಹೀಂದ್ರಾ ಬ್ಯಾಂಕನ ಎಸ್.ಇ.ನಟ–ರಾಜ, ರಾಜು ಕೋರಿ, ಕೆ.ಎನ್.ಮಂಜುನಾಥ, ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥ–ಣಿ, ಶಿವಾನಂದ ಶಾಭಾದಿ, ಬಸವರಾಜ ದೇಸಾಯಿ, ಎಸ್.ಆರ್.ಮನಹಳ್ಳಿ, ಅಶೋಕ ಸಜ್ಜನ,ಕುಮಾರ ಯಳ್ಳಿಗುತ್ತಿ, ಮಹಾಂತೇಶ ಶೆಟ್ಟರ ಸೇರಿದಂತೆ ಸಂಘದ ವಿವಿದ ಕಾಲೇಜುಗಳ ಪ್ರಾಚಾರ್ಯರು, ಸಿಬ್ಬಂದಿಗಳು ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಕಾರ್ಯಕ್ರಮಕ್ಕೂ ಮುಂಚೆ ಗೌರಿ ಶಂಕರ ಕಲ್ಯಾಣ ಮಂಟಪದಲ್ಲಿ 26 ರಿಂದ 28 ವರೆಗೆ ನಡೆಯುವ ಮೂರುದಿನಗಳ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಸಂಸದ ಗದ್ದಿಗೌಡರ ಚಾಲನೆ ನೀಡಿದರು.

ಗಮನಸೇಳೆದ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳ: ಇಮದಿನಿಂದ ಮೂರು ದಿನಗಳ ವರೆಗೆ ನಡೆಯುವ ಮೇಳದಲ್ಲಿ ಬಾಗಲಕೋಟೆ ಜಿಲ್ಲೆ ಸೇರಿದಮತೆ ವಿವಿಧ ಜಿಲ್ಲೆಗಳಿಂದ 75 ಮಳಿಗೆಗಳು ಆಗಮಿಸಿದ್ದು ಅನೇಕ ಗುಡಿಕೈಗಾರಿಕೆ,ಕರಕುಶಲ ವಸ್ತುಗಳು, ಖಾದಿ ಬಟ್ಟೆಗಳು, ಆಧುನಿಕ ಶೈಲಿಯ ಇಲಕಲ್ ಸೀರೆಗಳು,ಬೇರೆ ಬೇರೆ ಕಾಯಿಗಳಿಂದ ತಯಾರಿಸಿದ ಉಪ್ಪಿನಕಾಯಿಗಳು, ಮನೆಯ ಅಲಂಕಾರಿಕವಸ್ತುಗಳನೋಡುಗರಗಮನಸೇಳದವು.

# ಅಸ್ಪೃಶ್ಯರಿಗೆ ಒಳಮೀಸಲು ಜಾರಿಗೊಳಿಸದೇ ಗೊಂದಲಕ್ಕೆ ಅವಕಾಶ ನೀಡುತ್ತಿರುವ ಸಿದ್ದರಾಮಯ್ಯ ನಡೆ ಖಂಡನಿಯ

ಪರಿಶಿಷ್ಟ ಜಾತಿಗಳಲ್ಲಿ ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಅತಿ ಹಿಂದುಳಿದಿರುವ ಜಾತಿಗಳಿಗೆ ಸಮಾನ ಅವಕಾಶ ಕಲ್ಪಿಸಿಕೊಡುವುದು ಮೀಸಲಾತಿಯ ಸದುದ್ದೇಶವಾಗಿದ್ದು ಪರಿಶಿಷ್ಟ ಜಾತಿ ಪಂಗಡಗಳ ಉಪವರ್ಗಿಕರಣಕ್ಕೆ ಕೇಂದ್ರವು ಈಗಾಗಲೇ ಬೆಂಬಲಿಸಿದ್ದು. ಆಗಸ್ಟ್ ಒಂದರಂದು ಅಪೇಕ್ಸ್ ಕೋರ್ಟ್ ತೀರ್ಪು ಒಳಮೀಸಲು ನೀಡುವ ಜವಾಬ್ದಾರಿ ಆಯಾ ರಾಜ್ಯಗಳಿಗಿದೆ ಎಂದು ತೀರ್ಪು ನೀಡಿದ್ದರು ಇಲ್ಲಿಯವರೆಗೆ ಕರ್ನಾಟಕ ಸರಕಾರವು ಒಳಮೀಸಲಾತಿ ಜಾರಿಗಾಗಿ ಸ್ಪಷ್ಟತೆಯಿಂದ ಕ್ರಮವಹಿಸದೆ ವಿನಾಕಾರಣ ಎಸ್ ಸಿ ಸಮುದಾಯಗಳಲ್ಲಿ ದತ್ತಾಂಸಗಳ ಹೆಸರಲ್ಲಿ ಗೊಂದಲ ಸೃಷ್ಟಿಸುವ ಹುನ್ನಾರ ನಡೆಸಿದ್ದು ಶತಮಾನಗಳ ಕಾಲ ತಾರತಮ್ಯ ಕಂಡಿರುವ ಅಸ್ಪೃಶ್ಯ ವರ್ಗಕ್ಕೆ ಶೈಕ್ಷಣಿಕ ಮತ್ತು ಸಾಮಾಜಿ–ಕವಾಗಿ ಮತ್ತು ಔದ್ಯೋಗಿಕವಾಗಿ ಸಂವಿದಾನ ಬದ್ದ ಹಕ್ಕು ಸೌಲಭ್ಯಗಳನ್ನು ಸಮಾನವಾಗಿ ಹಂಚಲು ಸರಕಾರಕ್ಕೆ ಎಲ್ಲ್ ಅವಕಾಶಳಿದ್ದರು ಕೂಡಾ ಸುಪ್ರೀಂ ಕೋರ್ಟ್ ನೀಡಿದ ತೀರ್ಪು ಆದೇಶದ ವಿರುದ್ದ ಸರಕಾರವು ದ್ವಂದ್ವ ನಿಲುವು ದೋರಣೆ ಅನುಸರಿಸುತ್ತಾ ಸಮುದಾಯಗಳ ಹೋರಾಟದ ಭಾವನೆಗಳನ್ನು ಅಥ–ರ್ಯಿಸಿಕೊಳ್ಳದೆ ನುನುಚಿಕೊಳ್ಳುತ್ತಿದೆ ಎಂದು ಮಾದಿಗ ಮಹಾಸಭಾ ರಾಜ್ಯ ಸಮಿತಿಯು ಮುಖ್ಯಮಂತ್ರಿಗಳ ನಡೆ ವಿರುದ್ದ ಅಸಮಾಧಾನ ವ್ಯಕ್ತಪಡಿಸಿದೆ.

ಸುಪ್ರೀಂತೀರ್ಪುಬಂದುಮೂರುತಿಂಗಳಾದರೂ ಸಚಿವ ಸಂಪುಟದಲ್ಲಿಡದೆ ವಿನಾಕಾರಣ ಎಸ್ ಸಿ ಸಚಿವರು ಮತ್ತು ಶಾಸಕರಲ್ಲಿ ರಾಜಕೀಯವಾಗಿ ಗೊಂದಲ ತಂದಿಟ್ಟು ಅಸ್ಪೃಶ್ಯ ವರ್ಗಗಳಲ್ಲಿ ಅಸಮಾಧಾನವುಂಟು ಮಾಡುತ್ತಿರುವದು ಅತ್ಯಂತ ನೋವಿನ ಸಂಗತಿಯಾಗಿದೆ.

ಈಗಾಗಲೇ 2012 ರಂದು ನ್ಯಾ ಸದಾಶಿವ ಆಯೋಗವುಅತ್ಯಂತವೈಜ್ಞಾನಿಕದತ್ತಾಂಸಗಳುಳ್ಳ ವರದಿ ನೀಡಿದಂತೆ ಒಟ್ಟು ಎಸ್ ಸಿ 96,ಲಕ್ಷ 66,ಸಾವಿರದ 104 ಜನಸಂಖ್ಯೆ ಇದ್ದು,6 ಲಕ್ಷ 20ಸಾವಿರದ 320 ಸದಸ್ಯರು ತಮ್ಮ್ ಜಾತಿಗಳ ಉಪಜಾತಿ ನೀಡಲು ನಿರಾಕರಿಸಿದ್ದಾರೆ. ಎಡಗೈ ಸಂಬಂಧಿತ ಜಾತಿಗಳು 32 ಲಕ್ಷ 35 ಸಾವಿರದ



517 ರಷ್ಟಿದೆ, ಬಲಗೈ ಸಂಬಂಧಿತ ಜಾತಿಗಳು 30 ಲಕ್ಷ 93 ಸಾವಿರದ 693 ರಷ್ಟಿದೆ, ಕೋಲಂಭೋ ಜಾತಿಗಳ ಸಂಖ್ಯೆ 22 ಲಕ್ಷ 84 ಸ ಸಾವಿರದ 642 ರಷ್ಟಿದೆ, ಇತರೆ ಅಲೆಮಾರಿ ಸಣ್ಣ ಅತಿ ಸಣ್ಣ ಜಾತಿಗಳು 4 ಲಕ್ಷ 99 ಸಾವಿರದ 879 ರಷ್ಟಿವೆ, ಶೇ 15% ರ ಮೀಸಲಾತಿಯಲ್ಲಿ ಉಪವರ್ಗಿಕ–ರಿಸಲು ಶಿಪಾರಸ್ಸನ್ನು ಸದಾಶಿವ ಆಯೋಗ ಮಾಡಿದ್ದಿದೆ.

2020 ರಂದು ನ್ಯಾ ನಾಗಮೋಹನ ದಾಸ್ ಆಯೋಗ ವರದಿಯು 2011 ರ ಜನಸಂಖ್ಯೆ ಅನುಗುಣವಾಗಿ ಶೇ 15%ರ ಎಸ್ ಸಿ ಮೀಸಲಾತಿಯನ್ನು ಶೇ 17% ಕ್ಕೆ ಏರಿಸಿದೆ.ಶೇ 3% ರಷ್ಟಿದ್ದ ಎಸ್ ಟಿ ಮೀಸಲಾತಿಯನ್ನು ಶೇ 7% ಕ್ಕೆ ಏರಿಸಿದ ಅತ್ಯಂತ ನಿಖರವಾದ ವಸ್ತು ನಿಷ್ಠ ವರದಿಯನ್ನು ನೀಡಿದೆ. ಈ ಎರಡು ಆಯೋಗದ ವರದಿಗಳ ಅನುಷ್ಠಾನವನ್ನು ಅವಲೋಕಿಸಲು ಅಧ್ಯಯನ ನಡೆಸಿದ ನ್ಯಾ ಸುಭಾಸ ಅಡಿಗ ವರದಿಯು ಪುನರಪರಿಶೀಲಿಸಿ 2022 ರಲ್ಲಿ ವರದಿ ನೀಡಿದಂತೆ ಅದರನ್ವಯ ಸಚಿವ ಸಂಪುಟ ಉಪಸಮಿತಿಯು ಜೆ ಸಿ ಮಾಧುಸ್ವಾಮಿ,ನೇತೃತ್ವದಲ್ಲಿನ ಸದಸ್ಯರುಗಳಾದ ಗೋವಿಂದ ಎಂ ಕಾರಜೋಳ, ಎಸ್ ಅಂಗಾರ, ಪ್ರಭು ಚವ್ಹಾನ್, ಡಾ ಸುಧಾಕರ ಸದಸ್ಯ–ರಿರುವ ಉಪಸಮಿತಿಯು 2011 ರ ಜನಗಣತಿ ಅಂಕಿ ಅಂಶಗಳನ್ನು ಪರಿಗಣಿಸಿ ಶೇ 15% ರ ಮೀಸಲಾತಿಯನ್ನು ಶೇ 17% ಕ್ಕೇರಿಸಿರುವದರ ಆಧಾರದಲ್ಲಿ ಒಟ್ಟು 1,04,74,992 ರಷ್ಟಿರುವ ಎಸ್ ಸಿ ಜನಸಂಖ್ಯೆ ಅನುಗುಣವಾಗಿ ನಾಲ್ಕು ಗುಂಪು ಮಾಡಿ ಆಯಾ ಗುಂಪುಗಳ ಜನಸಂಖ್ಯೆಯ ಮಾನದಂಡವನ್ನಿಟ್ಟುಕೊಂಡು ಶೇ17%ರಲ್ಲಿಮೀಸಲಾತಿಯಲ್ಲಿ27:3:2023ರಲ್ಲಿ ಒಳಮೀಸಲಾತಿಗಾಗಿ ಕೇಂದ್ರಕ್ಕೆ ಬೊಮ್ಮಾಯಿ ಸರಕಾರವು ಶಿಫಾರಸ್ಸು ಮಾಡಿರುವ ವರದಿಯು ತಮ್ಮ್ ಬಳಿ ಇದೆ ಸದ್ಯ ಮಾಧುಸ್ವಾಮಿ ಉಪಸಮಿತಿಯ ಶೇ 17% ರನ್ವಯ್ ಅಥವಾ ನ್ಯಾ ಸದಾಶಿವ ಆಯೋಗದ ವರದಿ ಶೇ 15% ರನ್ವಯ ಯಾವುವುದಾದರೊಂದು ಪ್ರಮುಖ ವರದಿಗಳ ಅನ್ವಯ ಸುಪ್ರೀಂ ತೀರ್ಪು ಪರಿಗಣಿಸಿ ಜೊತೇಗೆ 2023 ರ ಸಾರ್ವತ್ರಿಕಾ ಚುನಾವಣೆಯಲ್ಲಿ ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ 6 ನೇ ಗ್ಯಾರಂಟಿಯಾಗಿ ಒಳಮೀಸಲಾತಿ ಜಾರಿ ಮಾಡುವಾದಾಗಿ ಘೋಷಿಸಿಕೊಂಡಿದ್ದಂತೆ ಸದ್ಯ ನಡೆಯುವ ಸಚಿವ ಸಂಪುಟದಲ್ಲಿ ಒಳಮೀಸಲಾತಿ ಜಾರಿಗಾಗಿ ಸರಕಾರವು ತನ್ನ ಬದ್ಧತೆಯನ್ನು ಪ್ರದರ್ಶಿಸಬೇಕು.

ದತ್ತಾಸಂಗಳ ಹೆಸರಲ್ಲಿ ಗೊಂದಲ ಸೃಷ್ಟಿಸುತ್ತ ಒಳಮೀಸಲು ಜಾರಿ ಮುಂದೂಡಿದರೆ ಸದ್ಯ ಸರಕಾರದಲ್ಲಿರುವ ಎಸ್ ಸಿ ಸಮುದಾಯದ ವಿವಿಧ ನಿಗಮಗಳನ್ನು ಸ್ಥಗಿತಗೊಳಿಬೇಕು,ಮತ್ತೆ ಸದ್ಯ ನೇಮಕಾತಿಗೆ ಚಾಲನೆ ನೀಡಿರುವದನ್ನು ಕೂಡಲೇ ನಿಲ್ಲಿಸಬೇಕು,ಮತ್ತು ಯಾವುದೇ ವಿಶೇಷ ಘಟಕ ಯೋಜನೆಯಲ್ಲಿ ನೀಡುವ ಅನುದಾನಗಳನ್ನು ಕೂಡಾ ಸರಕಾರವು ಬಳಸದೆ ಸದ್ಯಸ್ಥಗಿತಗೊಳಿಸಲೇಬೇಕು.ಇಲ್ಲದಿದ್ದರೆತಮ್ಮ್ ಸರಕಾರವು ಒಳಮೀಸಲು ಜಾರಿಗೊಳಿಸದೇ ಉದ್ದೇಶಪೂರ್ವಕ ಗೊಂದಲ ಸೃಷ್ಟಿಸುತ್ತಿರುವ ಹುನ್ನಾರ ಇದಾಗಿದೆ.ರಾಜಕಾರಣಕ್ಕಾಗಿ ಮತ ಬ್ಯಾಂಕ್ ಹೆಚ್ಚಿಸಿಕೊಳ್ಳೋ ದುರುದ್ದೇಶದಿಂದ ಅಸ್ಪೃಶ್ಯರಿಗೆ ಸಮಾನ ಮೀಸಲು ಅವಕಾಶ ನೀಡಬಾರದೇನ್ನುವ ಕುಂಟು ನೆಪದಲ್ಲಿ ಕಾಲಹರಣ ಮಾಡುವದಕ್ಕಾಗಿ ದತ್ತಾಂಸದ ಕಥೆ ಹೇಳುತ್ತಿದೆ ಎಂಬುದು ಬಹಿರಂಗ ಸತ್ಯವಾಗಿದ್ದು ಸದ್ಯ ನಡೆಯುವ ಉಪ ಚುನಾವಣೆಯಲ್ಲಿ ಶೋಷಿತ ಸಮುದಾಯದಲ್ಲಿ ಮಾತಜಾಗೃತಿ ಮಾಡಿ ನಿಮ್ಮ ಸರಕಾರಕ್ಕೆ ಸರಿಯಾದ್ ಪಾಠ ಕಳಿಸುವೆವು ಮಾದಿಗ ಮಹಾಸಭಾ ಕ್ಷೇಮಾಭಿವೃದ್ಧಿ ಸಂಘ ಕರ್ನಾಟಕ ರಾಜ್ಯ ಅಧ್ಯಕ್ಷ ಮುತ್ತಣ್ಣ ವೈ ಬೆಣ್ಣೂರ

ಸಂಘಟನಾ ರಾಜ್ಯ ಸಂಚಾಲಕರು ಶಿವಾನಂದ ಎಂ ಟವಳಿ ಜಿಲ್ಲಾಧ್ಯಕ್ಷರಾದ ಕಾಂತಿಚಂದ್ರ ಜ್ಯೋತಿ, ಜಿಲ್ಲಾ ಸಂಚಾಲಕರಾದ ಹಣಮಂತ ಚಿಮ್ಮಲಗಿ, ಜಂಟಿ ಹೇಳಿಕೆ ಮೂಲಕ ಎಚ್ಚ–ರಿಸಿದ್ದಾರೆ.

# ಭಾರತ್ ಸ್ಕೌಟ್ ಆ್ಯಂಡ್ ಗೈಡ್ಸ್‌ನ ಎರಡು ದಿನಗಳ ರಾಜ್ಯ ಪುರಸ್ಕಾರ ಪದಕ ಪರೀಕ್ಷಾ ಶಿಬಿರ



**ಬಳ್ಳಾರಿ:** ವಿದ್ಯಾರ್ಥಿಗಳು ಸ್ಕೌಟ್ ಗೈಡ್ಸ್ ಸೇರುವುದರಿಂದ ಜೀವನದಲ್ಲಿ ಶಿಸ್ತನ್ನು ಅಳವಡಿಸಿಕೊಳ್ಳಬಹುದು ಎಂದು ಜಿಂದಾಲ್ ಆದರ್ಶ ವಿದ್ಯಾಲಯದ ಪ್ರಾಚಾರ್ಯ ಕುಮಾರಸ್ವಾಮಿ ಬಳಗಾರ ಕಿವಿಮಾತು ಹೇಳಿದರು.

ಅವರು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ ಬಳ್ಳಾರಿ ಜಿಂದಾಲ್ ಆದರ್ಶ ವಿದ್ಯಾಲಯ ತೋರಣಗಲ್ ಇವರ ಸಂಯುಕ್ತ ಆಶ್ರಯದಲ್ಲಿ. ಅಕ್ಟೋಬರ್ 26-27 ರಂದು ಎರಡು ದಿನಗಳ ಕಾಲ ರಾಜ್ಯ ಪುರಸ್ಕಾರ ಪದಕ ಪರೀಕ್ಷಾ ಶಿಬಿರದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಎಸ್. ವಿಜಯ್ ಸಿಂಹ, ಜಿಲ್ಲಾ ಕಾರ್ಯದರ್ಶಿಗಳು ಬಳ್ಳಾರಿ ಶಿಬಿರ ಯಶಸ್ವಿ ಕುರಿತು ಮಾತನಾಡಿ ಎಲ್ಲ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಬಳ್ಳಾರಿ ಜಿಲ್ಲಾ ಸಹ ಕಾರ್ಯದರ್ಶಿಗಳಾದ

ಚಂದ್ರಣ್ಣ ಮಠದ. ಸ್ಕೌಟ್ಸ್ ವಿಭಾಗಕ್ಕೆ ನಾಯಕರಾಗಿ ಪ್ರಭಾಕರ್ ದಾಸರ್ ALT Scouts Koppal. ಗೈಡ್ಸ್ ವಿಭಾಗದಲ್ಲಿ ಶಿಬಿರದ ನಾಯಕರಾಗಿ ಮಲ್ಲೇಶ್ವರಿ ಜುಜಾರಿ ALT Guide Ballari ಇವರು ಮತ್ತು ಸಹಾಯಕ ನಾಯಕರಾಗಿ ವೀರಪ್ಪ ಗಾಣಿಗೇರ್ , ಹುಸೇನಸಾಬ ಮಕಾಂದಾರ

ಭೂಮಿಗೌಡ ಶ್ರೀ ರವಿ , ರಾಜ್ಯ ಪ್ರತಿನಿಧಿ ಸ್ಕೌಟ್ಸ್ ಶರಣಪ್ಪ ಹಡಪದ, ಶೈಲಜಾ. ಟಿ ಜೆ. ರವರು. ರೂಪಾ ಮೇಡಂ, ಮಹಮದ್ ಬಾಷಾ ಬಳ್ಳಾರಿ ಜಿಲ್ಲಾ ಸಂಘಟಕರು ಶರೀಫ ಹತ್ತಿಮತ್ತೂರ ಎ ಎಸ್ ಓ ಸಿ ಕೊಪ್ಪಳ, ಕಾರ್ಯಕ್ರಮದ ನಿರೂಪಣೆಯನ್ನು ಡಿ ಮೊಹಮ್ಮದ್ ಜಾವಿದ್ HWB Scout Master ರವರು ಮಾಡಿದರು.

ಶಿಬಿರದಲ್ಲಿ ಮಲ್ಲೇಶ್ವರಿ ಜುಜಾರಿ ಕಲ್ಯಾಣ ಕರ್ನಾಟಕ ಉಸ್ತುವಾರಿ ಇವರ ಪ್ರಾಸ್ತಾವಿಕ ನುಡಿಗಳನ್ನು ಆಡಿದರು ರೂಪ ಎಂ ರಾಯಚೂರು ಇವರು ವಂದನಾರ್ಪಣೆ ನೆರವೇರಿಸಿದರು.

ಬಳ್ಳಾರಿ ಮತ್ತು ಕೊಪ್ಪಳ ಎರಡು ಜಿಲ್ಲೆಯ ಸಂಪೂರ್ಣ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಈ ಶಿಬಿರದಲ್ಲಿ ಭಾಗವಹಿಸಲು ನೊಂದಣಿಯನ್ನು ಮಾಡಿಕೊಂಡಿದ್ದರು.

# ವಕ್ಫ್ ಆಸ್ತಿ ವಿಚಾರ ಯಾರಲ್ಲೂ ಗೊಂದಲ ಬೇಡ: ಸಚಿವ ಎಂ.ಬಿ. ಪಾಟೀಲ

**ವಿಜಯಪುರ :** ರೈತರ ಒಂದೇ ಒಂದು ಎಕರೆ ಜಮೀನು ವಕ್ಫ್ ಮಂಡಳಿಗೆ ವರ್ಗಾವಣೆಯಾಗಿಲ್ಲ. ಈ ವಿಷಯವಾಗಿ ಒಬ್ಬರೇ ಒಬ್ಬ ರೈತರಿಗೂ ನೋಟಿಸ್ ಜಾರಿಯಾಗಿಲ್ಲ, ವಿನಾಕಾರಣ ಯಾರೂ ಸಹ ಈ ವಿಷಯವಾಗಿ ಗೊಂದಲಕ್ಕೊಳಗಾಗಬಾರದು, ಕೆಲವರು ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ವಕ್ಫ್ ವಿಷಯವಾಗಿ ಸುಳ್ಳು ವಿಷಯಗಳನ್ನು ಹರಡುತ್ತಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಬಿ. ಪಾಟೀಲ ಹೇಳಿದರು.

ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವಕ್ಫ್ ಕಾಯ್ದೆ ರಚನೆಯಾದ ನಂತರ ತನಗೆ ಸೇರಿದ ಜಮೀನುಗಳನ್ನು ಇಂದೀಕರಣ ಮಾಡಿಕೊಳ್ಳಬೇಕಿತ್ತು, ಆದರೆ ಈ ಕಾರ್ಯ ನಡೆಯದ ಪರಿಣಾಮ ಅನೇಕ ಜಮೀನುಗಳು ವಕ್ಫ್‌ಗೆ ಸೇರಿರಲಿಲ್ಲ, ಆದರೆ ಈ ಯಾವ ಜಮೀನುಗಳು ಹಿಂದೂಗಳಿಗೆ ಸೇರಿಲ್ಲ, ಆದರೆ ಶೇ.30 ರಷ್ಟು ಜಮೀನುಗಳನ್ನು ಮಾತ್ರ ಮುಸ್ಲಿಂರು ಹಿಂದುಗಳಿಗೆ ಮಾರಾಟ ಮಾಡಿರಬಹುದು. ಹೀಗಾಗಿ ಈ ಬಗ್ಗೆಯೂ ಸಹ ಕಾನೂನಾತ್ಮಕ ಸಲಹೆ ಪಡೆದುಕೊಂಡು ಸರ್ಕಾರ ಮುಂದೆ ಹೆಜ್ಜೆ ಇಡಲಿದೆ ಎಂದರು.



ಹೊನವಾಡ ಗ್ರಾಮದ 1200 ಎಕರೆ ರೈತರ ಜಮೀನು ವಕ್ಫ್‌ಗೆ ಸೇರಲಿದೆ ಎಂಬುದು ಸುಳ್ಳು, ಈಗಾಗಲೇ ಈ ವಿವಾದಕ್ಕೆ ತೆರೆ ಎಳೆದಿದ್ದೇನೆ, ಒಬ್ಬರೇ ಒಬ್ಬ ರೈತರಿಗೂ ನೋಟಿಸ್ ನೀಡಿಲ್ಲ, ನೋಟಿಸ್ ನೀಡುವ ತಹಶೀಲ್ದಾರ ಇಲ್ಲಿಯೇ ಇದ್ದಾರೆ, ಅವರನ್ನೇ ಕೇಳಿ ಎಂದು ಪಾಟೀಲ ಹೇಳಿದರು.

ಹೊನವಾಡ ಗ್ರಾಮದ ಜಮೀನಿನಗಳು 1974 ರಲ್ಲಿ ವಕ್ಫ್ ಗೆಜೆಟ್‌ನಲ್ಲಿ ಸಂಪೂರ್ಣ ತಪ್ಪಾಗಿ ನಮೂದಾಗಿದೆ. ಅದು ಮೂಲತಃ ವಿಜಯಪುರದ ಮಹಲಭಾಗಾಯತ್ ದ ಸರ್ವೇ ನಂಬರಗಳು ಆಗಿವೆ, ಆಗಿರುವ ತಪ್ಪನ್ನು ಮಂಡಳಿ ಸರಪಡಿಸಿದೆ ಎಂದರು.

ಹೊನವಾಡ ಗ್ರಾಮದ 10 ರಿಂದ 11 ಎಕರೆ ಮಾತ್ರ ವಕ್ಫ್ ಉಳಿದ ಭೂಮಿ ರೈತರದ್ದು. ರೈತರ ಒಂದಿಂಚೂ ಭೂಮಿ ವಕ್ಫ್‌ಗೆ ಹೋಗಿಲ್ಲ ಎಂದು ಮತ್ತೆ ಸ್ಪಷ್ಟಪಡಿಸಿದರು.

ವಕ್ಫ್ ಆಸ್ತಿಗಳ ಬಗ್ಗೆ ವಿಜಯಪುರ ಜಿಲ್ಲೆಯಲ್ಲಿ ಬಹಳಷ್ಟು ಗೊಂದಲ ಸೃಷ್ಟಿ ಮಾಡಲಾಗಿದೆ. ರಾಷ್ಟ್ರೀಯ ಮಟ್ಟದಲ್ಲಿ ಈ ವಿಚಾರ ಮಾಧ್ಯಮಗಳಲ್ಲಿಯೂ ಈ ವಿವಾದ ಮುನ್ನೆಲೆಗೆ ಬರುತ್ತಿದೆ. ಈ ಬಗ್ಗೆ ಸುಳ್ಳು ಸುದ್ದಿ ಹರಡುವ ಕೆಲಸ ಮಾಡಲಾಗುತ್ತಿದೆ ಎಂದರು.

ಇಂಡಿ ತಾಲೂಕಿಗೆ ಸಂಬಂಧಿಸಿದಂತೆ ಇಂಡಿ ತಹಶಿಲ್ದಾರರು ನೋಟಿಸ್ ನೀಡದೆ ಸರ್ವೆ ನಂಬರ್‌ನಲ್ಲಿ 41 ರಲ್ಲಿ ಇಂದೀಕರಣ ಮಾಡಿದ್ದಾರೆ. ಹೀಗಾಗಿ ಇದನ್ನು ಉಪವಿಭಾಗಾಧಿಕಾರಿಗಳು ತನಿಖೆ ನಡೆಸಲು ನಿರ್ದೇಶನ ನೀಡಲಾಗಿದೆ ಎಂದರು.

ವಿಜಯಪುರ ಜಿಲ್ಲೆಯಲ್ಲಿ 14,201 ಎಕ-ರೆ ಒಟ್ಟು ಆಸ್ತಿ ವಕ್ಫಗೆ ಸೇರಿದ್ದು, ಭೂ ಸುಧಾರಣಾ ಕಾಯ್ದೆ ಮೊದಲಾದವುಗಳಿಂದ ಸಾವಿರಾರು ಎಕರೆ ಇನ್ನೂ ಮಂಡಳಿಗೆ ಇಂದೀಕರಣವಾಗಿಲ್ಲ, ಆದರೆ ಈ ಜಮೀನುಗಳು ಹಿಂದೂಗಳಿಗೆ ಸೇರಿಲ್ಲ, ಆದರೆ ಶೇ.30 ರಷ್ಟು ಮಾತ್ರ ಹಿಂದೂಗಳಿಗೆ ಮಾರಾಟವಾಗಿದ್ದು ಕಂಡು ಬಂದಿದೆ ಎಂದರು.

**ಟಾಸ್ಕ್‌ಫೋರ್ಸ್ ರಚನೆ**

ವಕ್ಫ್‌ಗೆ ಸಂಬಂಧಿಸಿದಂತೆ ಸಮಗ್ರವಾದ ಕಾರ್ಯ ಯೋಜನೆ ರೂಪಿಸಿ ಈ ಸಮಸ್ಯೆಯನ್ನು ಇತ್ಯರ್ಥಪಡಿಸಲು ಹಾಗೂ ಯಾವ ರೀತಿಯ ಸಮಸ್ಯೆ ಉಂಟಾಗದಂತೆ ನೋಡಿಕೊಳ್ಳಲು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಟಾಸ್ಕ್‌ಫೋರ್ಸ್ ರಚನೆ ಮಾಡಲಾಗುವುದು. ಉಪ ವಿಭಾಗಾಧಿಕಾರಿಗಳು, ತಹಶೀಲ್ದಾರರು ಸೇರಿದಂತೆ ಹಲವಾರು ಅಧಿಕಾರಿಗಳು ವಕ್ಫ್ ನೋಟಿಫಿಕೇಶನ್ ಮುಂಚಿನ ಭೂದಾಖಲೆಗಳನ್ನು ಅಧ್ಯಯನ, ಪರಿಶೀಲನೆ ಮಾಡಲಿದೆ ಎಂದರು.

ಜಿಲ್ಲೆಯ 1 ಎಕರೆ 36 ಗುಂಟೆಗೆ ಸಂಬಂಧಿಸಿದಂತೆ ಗುರುಲಿಂಗ ವಿರಕ್ತಮಠಕ್ಕೆ ಸೇರಿದ ಜಮೀನು ವಕ್ಫ್ ಎಂದು ಆಗಿತ್ತು, ಆದರೆ ಸರ್ವೇ ನಂಬರ್ ಗೊಂದಲದಿಂದ ಈ ಅಚಾತುರ್ಯವಾಗಿತ್ತು, ಸರ್ವೇ ನಂ.1029 ರ ಬದಲಾಗಿ ಸರ್ವೇ ನಂ.1020 ಎಂದು ನಮೂದಾದ ಕಾರಣ ಈ ಗೊಂದಲ ಸೃಷ್ಟಿಯಾಗಿತ್ತು ಎಂದರು.

ಜಿಲ್ಲಾಧಿಕಾರಿ ಟಿ. ಭೂಬಾಲನ್, ಇಂಡಿ ಉಪವಿಭಾಗಾಧಿಕಾರಿ ಆಬೀದ್ ಗದ್ಯಾಳ, ಪಾಲಿಕೆ ಆಯುಕ್ತ ವಿಜಯಕುಮಾರ ಮೆಕ್ಕಳಕಿ, ವಕ್ಫ್ ಇಲಾಖೆಯ ಅಧಿಕಾರಿ ವರ್ಗದವರು ಪತ್ರಿಕಾಗೋಷ್ಠಿಯಲ್ಲಿ ಇದ್ದರು.

# ರಸ್ತೆ ಅಪಘಾತ ಅಂಗವಿಕಲ ಸಗಣಿ ಬಸ್ಯಾ ಸಾವು

**ಬಳ್ಳಾರಿ. (ಹಡಗಲಿ):** ಟಾಟಾ ಎಸ್ ವಾಹನ ಮೈಮೇಲೆ ಹರಿದು ಅಂಗವಿಕಲ ವ್ಯಕ್ತಿಯೊಬ್ಬ ಸಾವೀಗೀಡಾದ ಘಟನೆ ಹೊಳಲು ಸಮೀಪದ ಬೂದನೂರು ಬಳಿ ಸಂಭವಿಸಿದೆ.

ಎರಡು ಕಾಲು ಅಂಗ ವೈಕಲ್ಯಾದಿಂದ ಬಳಲುತ್ತಿದ್ದ ವ್ಯಕ್ತಿ ಸಗಣಿ ಬಸ್ಯಾ ಪ್ರತಿದಿನ ಬೇರಿಂಗ್ ತಳ್ಳುಗಾಡಿಯಲ್ಲಿ ಕುಳಿತುಕೊಂಡು ಕೈಯಿಂದ ತಳ್ಳಿಕೊಂಡು ಚಲಾಯಿಸುತ್ತಾ ರಸ್ತೆಯಲ್ಲಿನ ಸಗಣಿಯನ್ನು ಬಳಿದು ರೈತರಿಗೆ ಮಾರಾಟ ಮಾಡಿ ತನ್ನ ತುತ್ತಿನ ಚೀಲವನ್ನು ತುಂಬಿಸಿಕೊಳ್ಳುತ್ತಿದ್ದ ಸಗಣಿ ಬಸ್ಯಾ ಎಂಬ ವ್ಯಕ್ತಿ ರಸ್ತೆಯಲ್ಲಿ ತನ್ನ ಬೇರಿಂಗ್ ತಳ್ಳು ವಾಹನದಲ್ಲಿ ಸಂಬಂಧಿಕರ ಮನೆಗೆ ಹೋಗುತ್ತಿದ್ದಾಗ ರಸ್ತೆ ಅಪಘಾತದಲ್ಲಿ ಸಾವಿಗೆ ಈಡಾಗಿದ್ದಾನೆ. ರಸ್ತೆಯಲ್ಲಿ ಹೋಗುವಾಗ ಟಾಟಾ ಏಸ್ ಗೂಡ್ಸ್ ಗಾಡಿಯು ಡಿಕ್ಕಿ ಹೊಡೆದಿದ್ದರಿಂದ ಸಗಣಿ ಬಸ್ಯಾ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ

ತನ್ನ ತುತ್ತಿನ ಚೀಲ ತುಂಬಿಸಿಕೊಳ್ಳಲು ತಳ್ಳುವ ಗಾಡಿಯಲ್ಲಿಯೇ ರಸ್ತೆಯಲ್ಲಿ ಬಿದ್ದಿದ್ದ ಸಗಣಿಯನ್ನು ಬಾಚಿಕೊಂಡು ಒಂದಡೆ ಸಂಗ್ರಹಿಸಿ ಅದನ್ನು ಮಾರಿ ಜೀವನ ಸಾಗಿಸುವ ಮೂಲಕ ಸ್ವಾವಲಂಬಿ ಬದುಕು ಕಟ್ಟಿಕೊಂಡು ಸಗಣಿ ಬಸ್ಯಾ ಎಂದೆ ಸುತ್ತಮುತ್ತಲ ಜನರಿಗೆ ಪರಿಚಯವಾಗಿದ್ದ.

ಕಳೆದವರ್ಷ ಇದ್ದ ಒಬ್ಬ ತಾಯಿಯನ್ನು ಕಳೆದುಕೊಂಡಿದ್ದ ಸಗಣಿ ಬಸ್ಯಾ ಊಟಕ್ಕಾಗಿ ಸಮೀಪದ ಬೂದನೂರಿನ ಸಂಬಂಧಿಕರ ಮನೆಗೆ ತೆರಳುತ್ತಿದ್ದ.

ಬುಧವಾರ ಸಂಜೆ ಹಾನಗಲ್ಲ ತಾಲೂಕಿನ ವೀರಾಪುರ ಗ್ರಾಮದ ಟಾಟ ಎಸ್ ಗಾಡಿಯು ಎತ್ತುಗಳನ್ನು ಹೇರಿಕೊಂಡು ಹೂವಿನಹಡಗಲಿ ಹೋಗುತ್ತಿತ್ತು ಈ ವೇಳೆ ಚಾಲಕನ ನಿಯಂತ್ರಣ ತಪ್ಪಿ ಗಾಡಿಯು ರಸ್ತೆಬದಿಯಲ್ಲಿ ಪ್ರಯಾಣಿಸುತ್ತಿದ್ದ ಅಂಗವಿಕಲ ಬಸ್ಯಾನ ಮೈಮೇಲೆ ಹರಿದಿದೆ. ಇದರಿಂದ ಗಂಭೀರವಾಗಿ ಗಾಯಗೊಂಡಿದ್ದ ಸಗಣಿ ಬಸ್ಯಾನನ್ನು ಹೊಳಲು ಪೊಲೀಸ್ ಉಪಠಾಣೆ ಎ.ಎಸ್.ಐ ಮಲ್ಲಿಕಾರ್ಜುನ ನಾಯ್ಕ್ ಹಾಗೂ ಸಿಬ್ಬಂದಿ ಚಿಕಿತ್ಸೆಗೆಂದು ಹೊಳಲು ಸರಕಾರಿ ಆಸ್ಪತ್ರೆಗೆ ಸಾಗಿಸುವಾಗ ದಾರಿ ಮಧ್ಯದಲ್ಲಿಯೇ ಬಸವ ಅಸುನೀಗಿದ್ದಾನೆ. ಪೊಲೀಸ್ ಸಿಬ್ಬಂದಿ ವಾಹನ ಹಾಗೂ ಚಾಲಕನನ್ನು ವಶಕ್ಕೆ ಪಡೆದು ದೂರು ದಾಖಲಿಸಿಕೊಂಡಿದ್ದಾರೆ. ವಿಷಯ ತಿಳಿದ ಅಕ್ಕಪಕ್ಕದ ಊರಿನ ಜನರು ಮತ್ತು ಹೊಳಲು ಗ್ರಾಮದ ಜನರು ಸೆಗಣಿ ಬಸ್ಯನ ಸಾವಿನ ಸುದ್ದಿ ಕೇಳಿ ಮಮ್ಮಲ ಮರುಗಿದ್ದಾರೆ.

# ಬಿ.ಎಲ್.ಡಿ.ಇ ಸಂಸ್ಥೆ ಕಾರ್ಯ ವ್ಯಾಪ್ತಿ ದೇಶಾದ್ಯಂತ ವಿಸ್ತರಣೆಗೆ ಹೆಸರಿನಲ್ಲಿ ಬದಲಾವಣೆ: ಸಚಿವ ಎಂ.ಬಿ. ಪಾಟೀಲ

**ವಿಜಯಪುರ :** ಸಂಸ್ಥೆಯ ಜನಸೇವೆಯನ್ನು ರಾಷ್ಟ್ರವ್ಯಾಪಿ ವಿಸ್ತರಿಸುವ ಸದುದ್ದೇಶದಿಂದ ಬಿಜಾಪುರ ಲಿಂಗಾಯತ ಡಿಸ್ಟ್ರಿಕ್ಟ್ ಎಜುಕೇಶನ್ ಅಸೋಸಿಯೇಷನ್ ಹೆಸರನ್ನು ಭಾರತೀಯ ಲಿಂಗಾಯತ ಡೆವಲೆಪಮೆಂಟ್ ಎಜುಕೇಶನ್ ಅಸೋಸಿಯೇಷನ್ ಎಂದು ಬದಲಾಯಿಸಲು ಭಾನುವಾರ ನಡೆದ ಬಿ.ಎಲ್.ಡಿ.ಇ ಸಂಸ್ಥೆಯ ಸರ್ವ ಸದಸ್ಯರ ವಿಶೇಷ ಸಭೆಯಲ್ಲಿ ಒಕ್ಕೊರಲಿನಿಂದ ಅನುಮೋದನೆ ನೀಡಲಾಗಿದೆ.

ಸಂಸ್ಥೆಯ ಅಧ್ಯಕ್ಷ ಎಂ. ಬಿ. ಪಾಟೀಲ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಮಹತ್ವದ ನಿರ್ಣಯ ಕೈಗೊಳ್ಳಲಾಗಿದೆ.

ಸಭೆಯಲ್ಲಿ ಮಾತನಾಡಿದ ಎಂ. ಬಿ. ಪಾಟೀಲ ಅವರು, 1910ರಲ್ಲಿ ವಿಜಯಪುರದಲ್ಲಿ ಬಿಜಾಪುರ ಲಿಂಗಾಯತ ಡಿಸ್ಟ್ರಿಕ್ಟ್ ಎಜುಕೇಶನಲ್ ಅಸೋಸಿಯೇಷನ್ ಪ್ರಾರಂಭವಾಗಿತ್ತು. ಈಗ ವಿಜಯಪುರ ಜಿಲ್ಲೆ ವಿಭಜನೆಯಾಗಿದೆ. ಸಂಸ್ಥೆಯ ವತಿಯಿಂದ ಬೆಂಗಳೂರಿನ ಹೃದಯ ಭಾಗದಲ್ಲಿ ರೂ. 300 ಕೋ. ವೆಚ್ಚದಲ್ಲಿ ಜಮೀನು ಖರೀದಿಸಲಾಗಿದೆ. ಮುಂಬರುವ ದಿನಗಳಲ್ಲಿ ನಾನಾ ಕಾಲೇಜುಗಳನ್ನು



ಪ್ರಾರಂಭಿಸುವ ಉದ್ದೇಶವಿದೆ. ಈ ಮೂಲಕ ಸಂಸ್ಥೆಯ ಕಾರ್ಯ ವ್ಯಾಪ್ತಿಯನ್ನು ರಾಜ್ಯಕ್ಕೆ ವಿಸ್ತರಿಸಲಾಗುತ್ತಿದೆ.

ಭವಿಷ್ಯದಲ್ಲಿ ಸಂಸ್ಥೆಯ ಕಾರ್ಯ ವ್ಯಾಪ್ತಿಯನ್ನು ದೇಶಾದ್ಯಂತ ವಿಸ್ತರಿಸುವ ಸದುದ್ದೇಶದಿಂದ ಈಗ ಇರುವ ಸಂಸ್ಥೆಯ ಟೈಟಲ್ ನಲ್ಲಿ ಬಿಜಾಪುರ ಬದಲು ಭಾರತೀಯ ಮತ್ತು ಡಿಸ್ಟ್ರಿಕ್ಟ್ ಬದಲು ಡೆವಲೆಪಮೆಂಟ್ ಶಬ್ದಗಳನ್ನು ಸೇರಿಸಿ ಬದಲಾವಣೆ ಮಾಡಲಾಗುತ್ತಿದೆ. ಇನ್ನು ಮುಂದೆ ಬಿಜಾಪುರ ಲಿಂಗಾಯತ ಡಿಸ್ಟ್ರಿಕ್ಟ್ ಎಜುಕೇಶನ್ ಅಸೋಸಿಯೇನ್ ಹೆಸರು ಭಾರತೀಯ ಲಿಂಗಾಯತ ಡೆವಲೆಪಮೆಂಟ್ ಎಜುಕೇಶನ್ ಅಸೋಸಿಯೇಷನ್ ಎಂದು ಬದಲಾಗಲಿದೆ. ಈ ಮೂಲಕ ಸಂಸ್ಥೆಯ ಸೇವಾವ್ಯಾಪ್ತಿ ದೇಶಾದ್ಯಂತ ವಿಸ್ತರಣೆಯಾಗಲಿದೆ ಎಂದು ಹೇಳಿದರು.

ಸಂಸ್ಥೆಯ ಹೆಸರು ಬದಲಾವಣೆಯಾದರೂ ಅದರ ಮೂಲ ಸಂಕ್ಷಿಪ್ತ ಹೆಸರು ಬಿ.ಎಲ್.ಡಿ.ಇ. ಅಸೋಸಿಯೇಷನ್ ಯಥಾರೀತಿ ಉಳಿಯಲಿದೆ. ಈ ಮೂಲಕ ಸಂಸ್ಥೆಯ ಪ್ರಾತಃಸ್ಮರಣೀಯರಾದ ವಚನಪಿತಾಮಹ ಡಾ. ಫ. ಗು. ಹಳಕಟ್ಟಿ, ಬಂಥನಾಳ ಶ್ರೀಗಳು, ಶ್ರೀ ಬಿ. ಎಂ. ಪಾಟೀಲ ಹಾಗೂ ಬಂಗಾರಮ್ಮ ಸಜ್ಜನ ಅವರ ದೂರದೃಷ್ಠಿಯ ಸಮಾಜ ಸೇವೆಯ ಚಿಂತನೆಯನ್ನು ದೇಶಾದ್ಯಂತ ವಿಸ್ತರಿಸಲಾಗುತ್ತಿದೆ. ಇದರಿಂದ ಭವಿಷ್ಯ ಜನಾಂಗಕ್ಕೂ ಸಾಕಷ್ಟು ಅನುಕೂಲವಾಗಲಿದೆ ಎಂದು ಎಂ. ಬಿ. ಪಾಟೀಲ ಅವರು ಹೇಳಿದರು.

ಸಭೆಯ ಪ್ರಾರಂಭದಲ್ಲಿ ಸಂಸ್ಥೆಯ ಮೃತ ಸದಸ್ಯರಾದ ಪ್ರಭು ಬಸವಂತಪ್ಪ ಕುಪ್ಪಿ, ಬಾಲಚಂದ್ರ ಅಪ್ಪಾಸಾಹೇಬ ಪಾಟೀಲ, ಪ್ರಕಾಶ ಶ್ರೀನಿವಾಸ ಶೆಟ್ಟಿ, ಹಣಮಂತ ರಾಮಪ್ಪ ಬಿರಾದಾರ, ಸಿದ್ದಪ್ಪ ನಿಂಗಪ್ಪ ಜನವಾಡ ಅವರಿಗೆ ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ಸಭೆಯಲ್ಲಿ ಸಂಸ್ಥೆಯ ಪ್ರದಾನ ಕಾರ್ಯದರ್ಶಿ ಜಿ. ಕೆ. ಪಾಟೀಲ, ನಿರ್ದೇಶಕರಾದ ಸುನೀಲಗೌಡ ಪಾಟೀಲ, ಬಸನಗೌಡ ಎಂ. ಪಾಟೀಲ, ಅಶೋಕ ವಾರದ, ಸಂಗು ಸಜ್ಜನ, ವಿ. ಎಸ್. ಪಾಟೀಲ ಬಬಲೇಶ್ವರ, ಕುಮಾರ ದೇಸಾಯಿ, ಕೆ. ಕೆ. ಪಾಟೀಲ ತೊರವಿ, ಡಾ. ಎ. ಬಿ. ಪಾಟೀಲ ಲಿಂಗದಳ್ಳಿ, ಆಜೀವ, ಪೋಷಕ ಮತ್ತು ಸರ್ವ ಸದಸ್ಯರು, ಬಿ.ಎಲ್.ಡಿ.ಇ ಸಂಸ್ಥೆಯ ನಾನಾ ಆಡಳಿತಾಧಿಕಾರಿಗಳು, ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಮಳೆಯಿಂದ ಆದ ಬೆಳೆ ನಷ್ಟಕ್ಕೇ ಕೂಡಲೇ ಪರಿಹಾರ ನೀಡಲು ಕ್ರಮಕೈಗೊಳ್ಳಿ: ಕುರುಬೂರು ಶಾಂತಕುಮಾರ್ ಒತ್ತಾಯ



**ಬಳ್ಳಾರಿ :** ರಾಜ್ಯಾದ್ಯಂತ ಮಿತಿಮೀರಿದ ಮಳೆಯಿಂದ ಅತಿವೃಷ್ಟಿ ಉಂಟಾಗಿ ಇದರಿಂದ ಕಬ್ಬು. ಬತ್ತ. ಬಾಳೆ ಇನ್ನಿತರ ಬೆಳೆಗಳು ನಾಶವಾಗಿವೆ. ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ನಷ್ಟದ ಸಮೀಕ್ಷೆ ಮಾಡಿಸಿ ವಿಪತ್ತು ಪರಿಹಾರ ನಿಧಿಯಿಂದ ಕೂಡಲೇ ಪರಿಹಾರ ವಿತರಿಸಲು ಕ್ರಮ ಕೈಗೊಳ್ಳಬೇಕೆಂದು ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ಕಬ್ಬು ಬೆಳೆಗಾರ ಸಂಘದ ರಾಜ್ಯಾಧ್ಯಕ್ಷರಾದ ಕುರುಬೂರ ಒತ್ತಾಯಿಸಿದರು.

ಅವರು ಇಂದು ನಗರದ ರೇಣುಕಾ ಹೋಟೆಲ್ನಲ್ಲಿ ಪತ್ರಕರ್ತನ್ನು ಉದ್ದೇಶಿಸಿ ಮಾತನಾಡಿ, ರಾಜ್ಯಾದ್ಯಂತ ಎಪಿಎಂಸಿಗಳಲ್ಲಿ ರೈತರು ಮಾರಾಟ ಮಾಡುವ ತರಕಾರಿ ಹಣ್ಣು ದಿನಸಿಗಳಿಗೆ 10% ಕಮಿಷನ್ ಹಣವನ್ನು ದಲ್ಲಾಳಿಗಳು ರೈತರಿಂದ ವಸೂಲಿ ಮಾಡುತ್ತಿದ್ದಾರೆ, ಹಾಗೂ ವೇಸ್ಟೇಜ್ ಎಂದು ಮೂರು ನಾಲ್ಕು ಕೆಜಿ ಸಂಗ್ರಹಿಸುತ್ತಿದ್ದಾರೆ ಇದು ಕಾನೂನು ಬಾಹಿರವಾಗಿರುತ್ತದೆ ಈ ಬಗ್ಗೆ ಕಠಿಣ ಕ್ರಮ ಕೈಕೊಂಡು ರೈತರ ಶೋಷಣೆ ನಿಲ್ಲಿಸಬೇಕೆಂದು ಕೃಷಿ ಮಾರಾಟ ಮಂಡಳಿ ರಾಜ್ಯ ಆಯುಕ್ತರಿಗೆ ಪತ್ರ ಬರೆದು ಒತ್ತಾಯಿಸಲಾಗಿದೆ ಎಂದು ಶಾಂತಕುಮಾರ್ ತಿಳಿಸಿದ್ದಾರೆ.

ಭತ್ತಕ್ಕೆ ನಿಗದಿ ಮಾಡಿರುವ ಕನಿಷ್ಠ ಬೆಂಬಲ ಬೆಲೆ ಉತ್ಪಾದನಾ ವೆಚ್ಚಕ್ಕೆ ಕಡಿಮೆಯಾಗಿರುವ ಕಾರಣ ರಾಜ್ಯ ಸರ್ಕಾರ ಪ್ರತಿ ಕ್ವಿಂಟಲ್ ಹೆಚ್ಚುವರಿ 500 ರು ಪ್ರೋತ್ಸಾಹಧನ ನೀಡಿ. ಭತ್ತ ಖರೀದಿ ಕೇಂದ್ರಗಳ ತೆರೆಯಬೇಕು.

ಅಲ್ಲದೆ ರಾಜ್ಯದಲ್ಲಿ ಆನ್ಲೈನ್ ಬೆಟ್ಟಿಂಗ್ ಗೇಮ್ ಮೊಬೈಲ್ ಬೆಟ್ಟಿಂಗ್ ಗೇಮ್ ಗಳ ಯಾಪ್ ಗಳನ್ನು ನಿಷೇಧಿಸಬೇಕು, ಇಂತಹ ಆಟಗಳಿಂದ ಯುವಕರ ಭವಿಷ್ಯ ಹಾಳಾಗುತ್ತಿದೆ ಹಣ ಕಳೆದುಕೊಂಡ ನೂರಾರು ಯುವಕರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಈಗಾಗಲೇ ಇಂತಹ ಯಾಪ್ ಗಳನ್ನು ತಮಿಳುನಾಡು. ತೆಲಂಗಾಣ ರಾಜ್ಯಗಳಲ್ಲಿ ನಿಷೇಧ ಮಾಡಿದ್ದಾರೆ ಅದರಂತೆ ರಾಜ್ಯದಲ್ಲಿಯೂ ಸಹ ಈ ಆಪ್ ಗಳನ್ನು ನಿಷೇಧ ಮಾಡಬೇಕು ಎಂದು ರಾಜ್ಯದ ಪೊಲೀಸ್ ಮಹಾ ನಿರ್ದೇಶಕರಿಗೆ ಒತ್ತಾಯ ಮಾಡಲಾಗಿದೆ ಎಂದು ಅವರು ತಿಳಿಸಿದರು.

# ಗ್ರಾಮೀಣ ಭಾಗದ ಸ್ವಸಹಾಯ ಸಂಘದ ಸದಸ್ಯರಿಗೆ ವರವಾಗುತ್ತಿರುವ ಡಿಜಿಟಲ್ ಸಾಕ್ಷರತಾ ತರಬೇತಿ

**ಕೊಟ್ಟೂರ್ :** ದಿನಾಂಕ 26/10/2024 ರಂದು ವಿಜಯನಗರ ಜಿಲ್ಲೆ, ಕೊಟ್ಟೂರು ತಾಲೂಕಿನ ಕೆ ಅಯ್ಯನಹಳ್ಳಿ ಗ್ರಾಮ ಪಂಚಾಯತ್ ಅರಿವು ಕೇಂದ್ರದಲ್ಲಿ ಸ್ವಸಹಾಯ ಸಂಘದ ಮಹಿಳೆಯರಿಗೆ ಡಿಜಿಟಲ್ ಸಾಕ್ಷರತಾ ತರಬೇತಿಯನ್ನು ನಡೆಸಲಾಯಿತು

**ಏನಿದು ಡಿಜಿಟಲ್ ಸಾಕ್ಷರತಾ ತರಬೇತಿ ?*:** ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಜೊತೆಯಲ್ಲಿ ಶಿಕ್ಷಣ ಫೌಂಡೇಶನ್ ಹಾಗೂ ಡೆಲ್ ಟೆಕ್ನಾಲಜಿ ಸಂಸ್ಥೆ ಸಹಯೋಗದಲ್ಲಿ ರಾಜ್ಯದ 5000 ಅರಿವು ಕೇಂದ್ರಗಳ ಮೇಲ್ವಿಚಾರಕರ ಮೂಲಕ 6 ಲಕ್ಷ ಸ್ವಸಹಾಯ ಸಂಘದ ಸದಸ್ಯರಿಗೆ ಹಾಗೂ 2 ಲಕ್ಷ ಸಮುದಾಯದ ಸದಸ್ಯರಿಗೆ ಡಿಜಿಟಲ್ ಸಾಕ್ಷರತಾ



ತರಬೇತಿಯನ್ನು ಒದಗಿಸುತ್ತಿದೆ.

**ತರಬೇತಿಯ ಉದ್ದೇಶ:** ಸಮುದಾಯ ಮತ್ತು ಸ್ವಸಹಾಯ ಸಂಘದ ಮಹಿಳೆಯರು ಸಂವಹನ ಮಾಡಲು, ಮಾಹಿತಿಯನ್ನ ಬಳಕೆ ಮಾಡಲು, ವ್ಯವಹಾರ ನಡೆಸಲು, ಹಾಗೂ ಸರಳ ಡಿಜಿಟಲ್ ವಹಿವಾಟುಗಳಿಗಾಗಿ ಸ್ಮಾರ್ಟ್ ಫೋನ್ ಗಳಂತಹ ಡಿಜಿಟಲ್ ಸಾಧನಗಳನ್ನು ಆತ್ಮವಿಶ್ವಾಸದಿಂದ ಬಳಸಲು ಅಗತ್ಯವಿರುವ ಕೌಶಲ್ಯವನ್ನು ವೃದ್ಧಿಸುವುದಾಗಿದೆ.

ಶಿಬಿರಾರ್ಥಿಗಳು ತರಬೇತಿಯಲ್ಲಿ ಕಿರು ವಿಡಿಯೋಗಳ ಸಹಾಯದಿಂದ ಸ್ಮಾರ್ಟ್ ಫೋನ್ ಬಳಕೆಯ ವಿಷಯಗಳನ್ನು ಕಲಿತುಕೊಂಡರು. ಮತ್ತು ಪ್ರಮುಖವಾಗಿ ದಿನನಿತ್ಯ ಜೀವನಕ್ಕೆ ಅಗತ್ಯವಾಗಿರುವ ಮೂಲಭೂತ ಡಿಜಿಟಲ್ ಸಾಕ್ಷರತೆಯನ್ನು ತರಬೇತಿಯ ಮೂಲಕ ಒದಗಿಸಲಾಗುತ್ತಿದೆ

ಈ ತರಬೇತಿಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀಧರ್ ಎಸ್ ಬಿ ರವರು ಭಾಗವಹಿಸಿ ಪ್ರಸ್ತುತ ದಿನಮಾನದಲ್ಲಿ ಡಿಜಿಟಲ್ ಸಾಕ್ಷರತೆ ಏಕೆ ಅವಶ್ಯಕ ಮತ್ತು ಎಷ್ಟು ಪ್ರಾ ವ್ ು ುಖ್ಯತೆ ೦ು ು ನ್ ು ು ಹೊಂದಿದೆ ಎಂಬುದರ ಬಗ್ಗೆ ಮಾಹಿತಿಯನ್ನು ಸ್ವಸಹಾಯ ಸಂಘದ ಸದಸ್ಯರಿಗೆ ತಿಳಿಸಿದರು. ತರಬೇತಿಯನ್ನ ಅರಿವು ಕೇಂದ್ರದಲ್ಲಿ ಮೇಲ್ವಿಚಾರಕರಾದ ಬಿ ಮುರುಗೇಶ್ ರವರು ಉತ್ತಮವಾಗಿ ಆ ಯೋಜನೆಯನ್ನು ಮಾಡಿದ್ದರು.

**ವರದಿ ಪರಶುರಾಮ್**

# ಗ್ರಾ.ಪಂ ಉಪ ಚುನಾವಣೆ: ಕರಡು ಮತದಾರರ ಪಟ್ಟಿ ಸಿದ್ಧ, ಅಕ್ಷೇಪಣೆ ಆಹ್ವಾನ

**ಹೊಸಪೇಟೆ (ವಿಜಯನಗರ) :** ವಿಜಯನಗರ ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ವಿವಿಧ ಕಾರಣಗಳಿಂದ ತೆರವಾದ ಗ್ರಾಮ ಪಂಚಾಯಿತಿ ಸದಸ್ಯರ ಸ್ಥಾನಗಳಿಗೆ ಉಪ ಚುನಾವಣೆ ನಡೆಯಲಿದ್ದು, ಅದರ ಕರಡು ಮತದಾರರ ಪಟ್ಟಿ ಪ್ರಕಟಿಸಿದೆ. ಮತದಾರರು ತಮ್ಮ ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸಬಹುದು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರು ತಿಳಿಸಿದ್ದಾರೆ. ಕಳೆದ ವಿಧಾನಸಭಾ ಕೇತ್ರ ಚುನಾವಣೆಯಲ್ಲಿ ಪ್ರಕಟಗೊಂಡ ಅಂತಿಮ ಮತದಾರರ ಪಟ್ಟಿ ಆಧಾರವಾಗಿ ಗ್ರಾ.ಪಂ ಉಪ ಚುನಾವಣೆ ನಡೆಸಲು ಕರಡು ಮತದಾರರ ಪಟ್ಟಿ ಸಿದ್ಧಪಡಿಸಲಾಗಿರುತ್ತದೆ. ಗ್ರಾ.ಪಂ ಉಪ ಚುನಾವಣೆ ನಡೆಯುವ ಗ್ರಾಮ ಪಂಚಾಯಿತಿ ಹಾಗೂ ಆಯಾ ತಾಲೂಕು ಕಚೇರಿಗಳಲ್ಲಿ ಕರಡು ಮತದಾರರ ಪಟ್ಟಿ ಪ್ರಕಟಿಸಲಾಗಿದ್ದು, ಗ್ರಾ.ಪಂ ಉಪ ಚುನಾವಣೆ ನಡೆಯುವ ಗ್ರಾಮದ ಮತದಾರರು ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಇರುವ ಕುರಿತು ಪರಿಶೀಲನೆ ಮಾಡಿಕೊಳ್ಳಲು ಹಾಗೂ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಂಬಂಧಿಸಿದ ತಹಶೀಲ್ದಾರರು ಹಾಗೂ ಸಹಾಯಕ ನೊಂದಣಾಧಿಕಾರಿಗಳ ಕಚೇರಿಗೆ ಸಂಪರ್ಕಿಸಬಹುದು.

ಚುನಾವಣೆ ನಡೆಯುವ ಗ್ರಾ. ಪಂಚಾಯಿತಿಗಳು: ಕೊಟ್ಟೂರು ತಾಲೂಕಿನ ನಾಗರಕಟ್ಟೆ, ರಾಂಪುರ ಮತ್ತು ಉಜ್ಜಿನಿ, ಹೂವಿನ ಹಡಗಲಿ ತಾಲೂಕಿನ ಮಾಗಳ, ಸೋವೆನಹಳ್ಳಿ ಮತ್ತು ಮಕ್ಕರಬ್ಬಿ, ಹಗರಿಬೊಮ್ಮನಹಳ್ಳಿ ತಾಲೂಕಿನ ಬ್ಯಾಸಿಗಿದೇರಿ, ಮೊರಗೇರಿ ಮತ್ತು ಗದ್ದಿಕೇರಿ, ಕೂಡ್ಲಿಗಿ ತಾಲೂಕಿನ ಸೂಲದಹಳ್ಳಿ, ಬಣವಿಕಲ್ಲು ಮತ್ತು ಬಣವಿಕಲ್ಲು, ಹರಪನಹಳ್ಳಿ ತಾಲೂಕಿನ ಯಡೀಹಳ್ಳಿ, ಕುಂಚೂರು ಮತ್ತು ಕೂಲಹಳಿ, ಹೊಸಪೇಟೆ ತಾಲೂಕಿನ ಡಣಾಯಕನಕೆರೆ, ಸೀತಾರಾಮತಾಂಡ, ಹಂಪಿ, ಮತ್ತು ಪಾಪಿನಾಯಕನಹಳ್ಳಿ ಗ್ರಾಮ ಪಂಚಾಯಿತಿಗೆ 2 ಸ್ಥಾನ ಉಳಿದ ಗ್ರಾಮ ಪಂಚಾಯಿತಿಗಳಿಗೆ ತಲಾ 1 ಸ್ಥಾನಗಳಂತೆ ಜಿಲ್ಲೆಯಲ್ಲಿ ಒಟ್ಟು 17 ಸ್ಥಾನಗಳಿಗೆ ಉಪಚುನಾವಣೆ ನಡೆಯಲಿದೆ.

## ಫ್ರೀಡಂ ಪಾರ್ಕ್‌ನಲ್ಲಿ ರಾಷ್ಟ್ರೀಯ ಆಯುರ್ವೇದ ದಿನಾಚರಣೆ

# 40ರ ನಂತರವಾದರೂ ಯೋಗ ಕಡ್ಡಾಯ ಬೇಕು?: ಡಾ. ಶಿಲ್ಪಾ ಎಸ್. ತೆಗ್ಗಿ ಸಲಹೆ

**ಹೊಸಪೇಟೆ :** ಮಹಿಳೆಯರಿಗೆ ಮಾಸಿಕ ಋತುಚಕ್ರ ನಿಲ್ಲುವ ಸಮಯದಲ್ಲಿ ಹಲವು ಸಮಸ್ಯೆಗಳು ಎದುರಾಗುತ್ತವೆ, ಇದರಿಂದ ಪಾರಾಗಬೇಕಿದ್ದರೆ 40ರ ನಂತರ ಯೋಗವನ್ನು ಕಡ್ಡಾಯವಾಗಿ ಮಾಡಬೇಕು ಎಂದು ಟಿಎಂಎಇಎಸ್ ಆಯುರ್ವೇದ ಕಾಲೇಜಿನ ಪ್ರಸೂತಿ, ಸ್ತ್ರೀರೋಗ ವಿಭಾಗದ ಸಹ ಪ್ರಾಧ್ಯಾಪಕಿ ಡಾ.ಶಿಲ್ಪಾ ಎಸ್.ತೆಗ್ಗಿ ಹೇಳಿದರು.

ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಪ್ರಯುಕ್ತ ಶುಕ್ರವಾರ ಇಲ್ಲಿನ ಫ್ರೀಡಂ ಪಾರ್ಕ್‌ನಲ್ಲಿ ಪತಂಜಲಿ ಯೋಗ ಸಮಿತಿಯು ಟಿಎಂಎಇಎಸ್ ಆಯುರ್ವೇದ ಕಾಲೇಜು ಸಹಯೋಗದಲ್ಲಿ ಹಮ್ಮಿಕೊಂಡಿದ್ದ '40ರ ನಂತರ ಮಹಿಳೆಯರ ಯೋಗಕ್ಷೇಮ' ಎಂಬ ವಿಷಯದ ಮೇಲೆ ಅವರು ಮಾತನಾಡಿದರು.

'ಯೋಗಾಸನದಿಂದ ಇಂದ್ರಿಯ ನಿಗ್ರಹ ಸುಲಭವಾಗುತ್ತದೆ, 40ರ ನಂತರ ಇದು ಬಹಳ ಅಗತ್ಯವಾಗುತ್ತದೆ. ಹೀಗಾಗಿ ಮಹಿಳೆಯರು 40ರ ನಂತರ ಯೋಗವನ್ನು ಕಡ್ಡಾಯವಾಗಿ ಮಾಡಬೇಕು. ಮುಟ್ಟು ನಿಲ್ಲುವ ಸಮಯದ ಯಾತನೆಗಳನ್ನು, ಕಷ್ಟಗಳನ್ನು




ಸುಲಭವಾಗಿ ಪರಿಹರಿಸಿಕೊಳ್ಳಬಹುದು' ಎಂದು ಅವರು ತಿಳಿಸಿದರು.

'ಮುಟ್ಟು ನಿಲ್ಲುವ ಸಮಯದಲ್ಲಿ ಹಾರ್ಮೋನ್‌ಗಳು ಏರುಪೇರಾಗುತ್ತವೆ. ಈಸ್ಟ್ರೋಜನ್ ಹಾರ್ಮೋನ್ ಕೊರತೆಯೇ ಬಹುಮಂದಿಗೆ ಕಾಡುವ ಸಮಸ್ಯೆ ಆಗಿರುತ್ತದೆ. ಆಗ ದೇಹದಲ್ಲಿ ಹಲವು ತೊಂದರೆಗಳೂ ಕಾಣಿಸುತ್ತವೆ. ವಾತ ಪ್ರಕೃತಿಯವರಿಗೆ ಈ ವಿಚಾರದಲ್ಲಿ ಹೆಚ್ಚು ತೊಂದರೆ ಉಂಟಾಗುತ್ತದೆ. ಹೀಗಾಗಿ ದೇಹ ಪ್ರಕೃತಿಗೆ ಅನುಗುಣವಾಗಿ ಆಹಾರ ಸೇವನೆಯ ಜತೆಗೆ, ವರ್ಷಕ್ಕೆ ಎರಡು ಬಾರಿ ವೈದ್ಯರೊಂದಿಗೆ ಆಪ್ತ ಸಮಾಲೋಚನೆ ನಡೆಸಿ ಆಹಾರ, ಜೀವನ ಶೈಲಿ ಸರಿಪಡಿಸಿಕೊಳ್ಳುವುದನ್ನು ರೂಢಿಸಿಕೊಳ್ಳಬೇಕು' ಎಂದರು.

'ಪ್ರಕೃತಿಗೆ ಅನುಗುಣವಾಗಿಯೇ ನಮ್ಮ ಆಹಾರವೂ ಇರಬೇಕು. ಎಲ್ಲಾ ತರಹದ ಬೇಳೆಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಫೈಟೋ ಈಸ್ಟ್ರೋಜನ್ ಹಾರ್ಮೋನ್ ಉತ್ಪತ್ತಿ ಮಾಡುವ ಸತ್ವ ಇರುತ್ತದೆ. ಹೀಗಾಗಿ ಬೇಳೆ ಬಳಕೆ ಹೆಚ್ಚಿಸಬೇಕು. ಕ್ಯಾಲ್ಸಿಯಂ ಅಧಿಕ ಪ್ರಮಾಣದಲ್ಲಿ ಇರುವ ತರಕಾರಿ, ಹಣ್ಣು ಸೇವಿಸಬೇಕು. ಅಮೃತಬಳ್ಳಿ, ನೆಲ್ಲಿಯನ್ನು ನೆಚ್ಚಿಕೊಳ್ಳಬೇಕು. ಆಹಾರ ಸೇವನೆಯಲ್ಲಿ ಸಮಯ ಪಾಲನೆ ಕಡ್ಡಾಯ. ಬೆಳಿಗ್ಗೆಯ ಉಪಾಹಾರವನ್ನು ತಪ್ಪಿಸಿಕೊಳ್ಳಬಾರದು. ಜತೆಗೆ ದಿನ 7ರಿಂದ 9 ತಾಸು ನಿದ್ದೆ ಮಾಡಬೇಕು' ಎಂದು ಡಾ.ಶಿಲ್ಪಾ ಸಲಹೆ ನೀಡಿದರು.

'ಒಣಹಣ್ಣುಗಳನ್ನು ನೇರವಾಗಿ ತಿನ್ನದೆ, ನೀರಲ್ಲಿ ನೆನೆಸಿಟ್ಟು ತಿನ್ನಬೇಕು' ಎಂದ ಅವರು, ಋತುಮಾನಕ್ಕೆ ತಕ್ಕಂತೆ ಬೆಳೆಯುವ ಹಣ್ಣುಗಳನ್ನೇ ನಾವೂ ಸೇವಿಸಬೇಕು, ಫ್ರಿಜ್‌ನಲ್ಲಿಟ್ಟ, ಪ್ಯಾಕ್ ಮಾಡಿದ ಹಣ್ಣುಗಳನ್ನು ಸೇವಿಸಬಾರದು' ಎಂದರು. ಆಸ್ಪತ್ರೆಯ ವೈದ್ಯ ಡಾ.ಸಂಪತ್, ಪತಂಜಲಿ ಯುವ ಭಾರತ

ರಾಜ್ಯ ಪ್ರಭಾರಿ ಕಿರಣ್ ಕುಮಾರ್, ಹಿರಿಯ ಯೋಗ ಸಾಧಕರಾದ ಮಂಗಳಮ್ಮ, ಅನಂತ ಜೋಷಿ, ಶ್ರೀರಾಮ, ಅಶೋಕ ಚಿತ್ರಗಾರ, ಶಿವಮೂರ್ತಿ, ಚಂದ್ರಿಕಾ ಶ್ರೀರಾಮ ಇತರರು ಇದ್ದರು. ಆರಂಭದಲ್ಲಿ ಸಾಮೂಹಿಕ ಯೋಗಾಭ್ಯಾಸ ನಡೆಸಿದ ಬಳಿಕ ಮಹಿಳೆಯರ ಆಪ್ತ ಸಮಾಲೋಚನೆಯ ಕಾರಣಕ್ಕೆ ಮಹಿಳೆಯರಿಗೆ ಮಾತ್ರ ಈ ಶಿಬಿರವನ್ನು ನಡೆಸಿಕೊಡಲಾಯಿತು. ಪುರುಷರಿಗೆ ಪ್ರತ್ಯೇಕ ಸ್ಥಳದಲ್ಲಿ ಯೋಗಾಭ್ಯಾಸದ ವ್ಯವಸ್ಥೆ ಕಲ್ಪಿಸಲಾಯಿತು.

**ವರದಿ ಎ ಚಿದಾನಂದ.**

# ಮಹಾನಗರ ಪಾಲಿಕೆ ವಾರ್ಡ ನಂ.29ಕ್ಕೆ ಉಪ ಚುನಾವಣೆ ಘೋಷಣೆ ಕರಡು ಮತದಾರರ ಪಟ್ಟಿ ಪ್ರಕಟ: ಆಕ್ಷೇಪಣೆಗಳ ಆಹ್ವಾನ

**ವಿಜಯಪುರ** : ರಾಜ್ಯ ಚುನಾವಣಾ ಆಯೋಗ ವಿಜಯಪುರ ಮಹಾನಗರ ಪಾಲಿಕೆಯ ವಾರ್ಡ–29ಕ್ಕೆ ಉಪ ಚುನಾವಣೆಯನ್ನು ಘೋಷಿಸಿ ಆದೇಶ ಹೊರಡಿಸಿದ್ದು, ಉಪಚುನಾವಣೆಗೆ ಸಂಬಂಧಿಸಿದಂತೆ ಮಹಾನಗರ ಪಾಲಿಕೆಯ ವಾರ್ಡ ನಂ.29 ಒಳಗೊಂಡಿರುವಮತದಾರರನ್ನುಅಳವಡಿಸಿಕೊಂಡು ಕರಡು ಮತದಾರರ ಪಟ್ಟಿಯನ್ನು ಅ.25ರಂದು ವಿಜಯಪುರ ಮಹಾನಗರ ಪಾಲಿಕೆಯ ಕಚೇರಿಯಲ್ಲಿ ಪ್ರಕಟಿಸಲಾಗಿದ್ದು,ಆಕ್ಷೇಪಣೆಗಳನ್ನುಆಹ್ವಾನಿಸಲಾಗಿದೆ. ದಿನಾಂಕ : 22–01–2024ರಂದು ಪ್ರಕಟವಾಗಿರುವ ವಿಧಾನಸಭಾ ಅಂತಿಮ ಮತದಾರರ ಪಟ್ಟಿ ಹಾಗೂ ಅರ್ಹತಾ ದಿನಾಂಕ:01–04–2024ರಂತೆ ದಿನಾಂಕ: 04–04–2024ರಂದು ಪ್ರಕಟಗೊಂಡಿರುವ ಪೂರಕ ಪಟ್ಟಿಯ ಮುದ್ರಿತ ಪ್ರತಿಯನ್ನು ಅಳವಡಿಸಿಕೊಂಡು ಕರಡು ಮತದಾರರ ಪಟ್ಟಿಯನ್ನು ಸಾರ್ವಜನಿಕರು ಹಾಗೂ ಮತದಾರರ ವೀಕ್ಷಣೆಗೆ ಪ್ರಕಟಿಸಲಾಗಿದ್ದು, ಪ್ರಕಟಿತಕರಡುಮತದಾರರಪಟ್ಟಿಗೆಆಕ್ಷೇಪಣೆಗಳಿದ್ದಲ್ಲಿ ದಿನಾಂಕ : 29–10–2024ರೊಳಗಾಗಿ ವಾಸವಿರುವ ವಾರ್ಡನ ವ್ಯಾಪ್ತಿಯಲ್ಲಿ ಇರದ ಬೇರೆ ವಾರ್ಡಗಳ ಮತದಾರರು ಪಟ್ಟಿಯಲ್ಲಿ ಸೇರ್ಪಡೆಯಾಗಿದ್ದಲ್ಲಿ ಅಥವಾ ವಿಧಾನಸಭಾ ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗದೇ ಇರುವ ಹೆಸರುಗಳನ್ನು ವಿಜಯಪುರ ವಾರ್ಡ ನಂ.29ರಲ್ಲಿ ತಯಾರಿಸಲಾದ ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗಿದ್ದಲ್ಲಿ ಮಾತ್ರ ಆಕ್ಷೇಪಣೆಗಳನ್ನು ಇತ್ಯರ್ಥಪಡಿಸಿ ಅಂತಿಮ ಮತದಾರರ ಪಟ್ಟಿಯನ್ನು ದಿನಾಂಕ : 30–10–2024 ರಂದು ಪ್ರಕಟಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಾಂತರಾಜ ಜಾತಿಗಣತಿ ವರದಿ ಜಾರಿಗೆ ಆಗ್ರಹಿಸಿ ಅಹಿಂದ ವರ್ಗದ ಸಭೆ



**ವಿಜಯಪುರ** : ಕಾಂತರಾಜ ಜಾತಿ ಗಣತಿ ವರದಿ ಬಿಡುಗಡೆ ಮಾಡಬೇಕು ಎಂದು ಅಹಿಂದ ಮುಖಂಡರು ಒತ್ತಾಯಿಸಿದರು.

ಭಾನುವಾರ ನಗರದ ಸಾರಿಪುತ್ರ ಬೌದ್ಧ ವಿಹಾರದಲ್ಲಿ ಸಭೆ ಸೇರಿದ ಜಿಲ್ಲೆಯ ಅಹಿಂದ ವರ್ಗದ ಮುಖಂಡರು, ಕಾಂತರಾಜ ಅವರ ಜಾತಿಗಣತಿ ವರದಿಯ ಮಹತ್ವ ಮತ್ತು ಅದರ ಅವಶ್ಯಕತೆ ಬಗ್ಗೆ ಚರ್ಚೆ ಮಾಡಲಾಯಿತು. ಜಾತಿಜನಗಣತಿ ಬಹಿರಂಗ ಮಾಡದಂತೆಸಿದ್ದರಾಮಯ್ಯಮತ್ತುಸರ್ಕಾರದಮೇಲೆ ಕೆಲವರು ಒತ್ತಡ ಹೇರುತ್ತಿದ್ದಾರೆ. ವರದಿ ಬಹಿರಂಗ ಮಾಡುವುದನ್ನು ತಡೆಯುವ ಷಡ್ಯಂತ್ರ ಮಾಡುತ್ತಿರುವ ಶಕ್ತಿಗಳನ್ನು ತಡೆಯಬೇಕಾದರೆ ಅಹಿಂದ ವರ್ಗದ ಶೇ.80ರಷ್ಟು ಜನ ಒಂದಾಗಬೇಕು ಮತ್ತು ಅವರನ್ನು ಜಾಗೃತಿ ಮಾಡಬೇಕು ಎಂದರು.

ಮುಂದಿನ ದಿನಗಳಲ್ಲಿ ಜಿಲ್ಲೆಯ ಪ್ರತಿ ತಾಲ್ಲೂಕಿನಲ್ಲಿ ಮುಖಂಡರು ಸಂಚರಿಸಿ ಜನರನ್ನು ಜಾಗೃತಿ ಮಾಡಿ ದೊಡ್ಡ ಹೋರಾಟ ಮಾಡಲು ನಿರ್ಧರಿಸಲಾಯಿತು.

ಈಸಂದರ್ಭದಲ್ಲಿಮಲ್ಲಿಕಾರ್ಜುನಬಟಗಿಮಾತನಾಡಿ, ಅಹಿಂದ ವರ್ಗದ ಮೇಲೆ ನಿಜವಾದ ಕಾಳಜಿ ಇದ್ದರೆ ಸಿದ್ದರಾಮಯ್ಯನವರು ಕೂಡಲೆ ಮೀಸಲಾತಿ ತಂದು ಸರ್ಕಾರದ ಶಾಲೆಯಲ್ಲಿ ಕಲಿತವರಿಗೆ ಉದ್ಯೋಗದಲ್ಲಿ ಶೇ.50ರಷ್ಟು ಮೀಸಲು ತರಲಿ ಎಂದರು.

ಸಭೆಯಲ್ಲಿ ರಾಜಶೇಖರ ಯಡಹಳ್ಳಿ, ಪ್ರಭುಗೌಡ ಪಾಟೀಲ, ಚೆನ್ನು ಕಟ್ಟಿಮನಿ, ಮಹಾದೇವ ಬನಸೂಡೆ, ಮಂಜುಳಾ ಪೂಜಾರಿ, ಬಸವರಾಜ ಸೂಳೆಬಾವಿ, ಬಿ.ಎಸ್.ಗಸ್ತಿ,ದೇವಾನಂದ ಲಚ್ಯಾಣ,ದಸ್ತಗಿರಿ ಮುಲ್ಲಾ ಹಾಗೂ ಇನ್ನೂ ಅನೇಕ ಅಹಿಂದ ಮುಖಂಡರು ಉಪಸ್ಥಿತರಿದ್ದರು.

# ಪ್ರೇಮಾ ಮುಮ್ಮಿಗಟ್ಟಿ ನಿಧನ



**ಧಾರವಾಡ** : ಕುಮಾರೇಶ್ವರ ನಗರದ ಲಿಂಗಾಯತ ನೇಕಾರ ಸಮಾಜದ ಸದಸ್ಯರಾದ ಸೋಮಶೇಖರ ಮುಮ್ಮಿಗಟ್ಟಿ ಅವರ ಪತ್ನಿ ಪ್ರೇಮಾ ಸೋಮಶೇಖರ ಮುಮ್ಮಿಗಟ್ಟಿ (74) ಇವರು ದಿನಾಂಕ: 27–10–2024 ರಂದು ರವಿವಾರ ನಿಧನರಾಗಿದ್ದಾರೆ. ಮೃತರು ಪತಿ, ಪುತ್ರ ಹಾಗೂ ಇಬ್ಬರೂ ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

# ಇಂದಿನ ವಿದ್ಯಾರ್ಥಿ–ಶಿಕ್ಷಕರ ನಡುವೆ ಗೌರವ–ಬಾಂಧವ್ಯದ ಕೊರತೆ ಸಾಹಿತಿ, ಪ್ರಾಧ್ಯಾಪಕ ಡಾ. ಯಶವಂತ ಕೊಕ್ಕನವರ ಅಭಿಪ್ರಾಯ



**ಚಿಮ್ಮಡ** : ಇಂದಿನ ವಿದ್ಯಾರ್ಥಿ–ಶಿಕ್ಷಕರ ಮನಸ್ಸುಗಳು ವಾಣಿಜ್ಜಿಕರಣಗೊಂಡ ಪರಿಣಾಮ ಶಿಕ್ಷಕರಿಗೆ ವಿದ್ಯಾರ್ಥಿಗಳ ಮೇಲೆ ಮಮತೆಯಿಲ್ಲ, ವಿದ್ಯಾರ್ಥಿಗಳಿಗೆ ಶಿಕ್ಷಕರ ಮೇಲೆ ಗೌರವವಿಲ್ಲದಂತಾಗಿರುವುದು ವಿಷಾದನೀಯ ಸಂಗತಿಯಾಗಿದೆ ಎಂದು ವಿಜಯಪುರ ಅಕ್ಕ ಮಹಾದೇವಿ ವಿಶ್ವವಿದ್ಯಾಲಯದ ಜಮಖಂಡಿ ಸ್ನಾತಕೋತ್ತರ ಕೇಂದ್ರದ ಕನ್ನಡ ಪ್ರಾಧ್ಯಾಪಕ, ಸಾಹಿತಿ ಡಾ. ಯಶವಂತ ಕೊಕ್ಕನವರ ಅಭಿಪ್ರಾಯ ವ್ಯಕ್ತಪಡಿಸಿದರು. ಗ್ರಾಮದ ಸರಕಾರಿ ಮಾದರಿ ಹೆಣ್ಣು ಮಕ್ಕಳ ಹಿರಿಯ ಪ್ರಾಥಮಿಕ ಶಾಲೆಯ ಸಭಾ ವೇದಿಕೆಯಲ್ಲಿ ರವಿವಾರ ಹಮ್ಮಿಕೊಳ್ಳಲಾಗಿದ್ದ ಸ್ನೇಹಸಂಭ್ರಮ ಹಾಗೂ ಗುರುವಂದನಾ ಕಾರ್ಯಕ್ರಮದ ಉದ್ಘಾಟಣೆ ನೆರವೇರಿಸಿ ಮಾತನಾಡಿದ ಅವರು ಕೇವಲ ಜ್ಞಾನದಿಂದ ಮಾತ್ರ ಜಗತ್ತು ಗೆಲ್ಲಲು ಸಾದ್ಯವಿಲ್ಲ ಜ್ಞಾನದೊಂದಿಗೆ ಪ್ರೀತಿಸುವ ಹೃದಯ ಬೇಕು, ಇಂದು ಹೃದಯಕ್ಕೆ ಶಿಕ್ಷಣ ನೀಡದ ಪರಿಣಾಮ ತಂದೆ, ತಾಯಿ, ಗುರುವಿನ ಮೇಲಿನ ಗೌರವ ಕಡಿಮೆಯಾಗುತ್ತಿದೆ ಇದಕ್ಕೆ ಬಯಸಿ ವೃತ್ತಿ ಆಯ್ಕೆಮಾಡಿಕೊಳ್ಳದೆ ಅನಿವಾರ್ಯವಾಗಿ ಶಿಕ್ಷಕರಾದವರೇ ಹೆಚ್ಚಾಗಿರುವುದರ ಪರಿಣಾಮ ಸಮತೋಲನದ ಶಿಕ್ಷಣ ಮಾಯವಾಗಿದೆ ಎಂದರು.

ಕಾರ್ಯಕ್ರಮದ ಸಾನಿಧ್ಯವಹಿಸಿದ ವಿರಕ್ತಮತದ ಶ್ರೀ ಪ್ರಭು ಮಹಾಸ್ವಾಮಿಗಳು ಮಾತನಾಡಿ ಮಕ್ಕಳಲ್ಲಿ ಸಂಸ್ಕಾರದ ಕೊರತೆಯಿಂದ ಶಿಕ್ಷಣದ ಮೌಲ್ಯ ಕುಸಿಯುತ್ತಿದ್ದು ಮಕ್ಕಳು ವಿದ್ಯಾರ್ಥಿಜೀವನದಲ್ಲಿಯೇ ದುಶ್ಚಟಗಳಿಗೆ ಬಲಿಯಾಗುತಿದ್ದಾರೆ, ಪಾಲಕ, ಶಿಕ್ಷಕರು ಈ ಕುರಿತು ಗಂಭೀರವಾಗಿ ಯೋಚಿಸುವ ಆವಶ್ಯಕತೆಯಿದೆ ಎಂದರು.

ಶಿಕ್ಷಕ ಶಶಿಕಾಂತ ಅಗಸರ ಪ್ರಾಸ್ತಾವಿಕವಾಗಿ ಮಾತನಾಡಿದರು, ನಿವೃತ್ತ ಶಿಕ್ಷಕಾದ ಎಂ.ಡಿ ವಾಲಿ, ಬಿ.ಸಿ. ಪೂಜೇರಿ, ಡಾ. ಸಿದ್ದು ಧಡೂತಿ, ಗುರುಮೂರ್ತಿ ಬರಗಲ್, ಅಂಜನಾ ಕತ್ತಿ, ಭಾರತಿ ಗೋವಿಂದಗೋಳ ಮಾತನಾಡಿದರು.

ಕಾರ್ಯಕ್ರಮದಲ್ಲಿ ರಘುನಾಥ ಪ್ರೀಯ ಸಾಧು ಮಹಾರಾಜರ ಮಠದ ಶ್ರೀ ಓಂಕಾರ ಮಹಾರಾಜರು ಸಾನಿಧ್ಯವಹಿಸಿದ್ದರು, ಅಧ್ಯಕ್ಷತೆಯನ್ನು ಹಣಮಂತ ಬಸಪ್ಪಾ ಪಾಟೀಲ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸರಕಾರಿ ಪ್ರೌಢಶಾಲೆಯ ಮುಖ್ಯೋಪಾದ್ಯಾಯೆ ಶ್ರೀಮತಿ ಮೈತ್ರಾದೇವಿ ಜಿಟ್ಟಿ, ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾದ್ಯಾಯೆ ಶ್ರೀಮತಿ ಮಾಲಾ ಹೊಸಮನಿ, ಹೆಣ್ಣು ಮಕ್ಕಳ ಶಾಲೆಯ ಮುಖ್ಯೋಪಾದ್ಯಾಯ ಎಸ್.ಎ. ಬಿರಾದರ ಆಗಮಿಸಿದ್ದರು ಇದೇ ಸಂಧರ್ಬದಲ್ಲಿ ಶ್ರೀಗಳು ಹಾಗೂ ಕಲಿಸಿದ ಗುರುಗಳಿಗೆ ಹೂಮಳೆಯೊಂದಿಗೆ ಸ್ವಾಗತಿಸಿ ಗುರುವಂದನೆ ಸಲ್ಲಿಸಲಾಯಿತು. ಕಾರ್ಯಕ್ರಮಕ್ಕೆ ಗೀತಾ ಧಡೂತಿ ಸ್ವಾಗತಿಸಿದರು, ಶಿಕ್ಷಕ ಪ್ರಕಾಶ ಪೂಜಾರಿ ನಿರೂಪಿಸಿದರು, ಉಪನ್ಯಾಸಕ ಪ್ರಕಾಶ ಬಡಿಗೇರ ವಂದಿಸಿದರು.

# ಬೆಂಗಳೂರ: ಡಾ. ಆನಂದ ಸಂಕೇಶ್ವರಗೆ ಲಾಜಿಸ್ಟಿಕ್ ಐಕಾನ್ ಪ್ರಶಸ್ತಿ



**ಬೆಂಗಳೂರು** : ಜೆಕೆ ಟೈರ್ ಕಂಪನಿ 20 ವರ್ಷಗಳ ಸಂಭ್ರಮಾಚರಣೆ ನಿಮಿತ್ತ ಇತ್ತೀಚೆಗೆ ಸಿಂಗಾಪುರದಲ್ಲಿ ಆಯೋಜಿಸಿದ್ದ ಉನ್ನತ ಮಟ್ಟದ ಸಮ್ಮೇಳನದಲ್ಲಿ ವಿಆರ್‌ಎಲ್ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕರಾದ ಡಾ. ಆನಂದ ಸಂಕೇಶ್ವರ ಅವರಿಗೆ ವರ್ಷದ ಲಾಜಿಸ್ಟಿಕ್ ಐಕಾನ್ ಪ್ರಶಸ್ತಿ ನೀಡಿ ಗೌರವಿಸಿದೆ.

ಆಧುನಿಕ ಲಾಜಿಸ್ಟಿಕ್ಸ್ ನಿರ್ವಹಣೆಯಲ್ಲಿ ಪರಿವರ್ತನೆಯ ಪಾತ್ರ ನಿರ್ವಹಿಸಿದ ಸರಕು ಸಾಗಣೆ ಉದ್ಯಮದ ಅಗ್ರ ವ್ಯಕ್ತಿಯೆಂದು ಗುರುತಿಸಿ ಡಾ. ಆನಂದ ಸಂಕೇಶ್ವರ ಅವರಿಗೆ ಈ ಪ್ರಶಸ್ತಿಯನ್ನು ನೀಡಲಾಗಿದೆ. ಸಮ್ಮೇಳನದಲ್ಲಿ ದೇಶ ಅಗ್ರ 100 ಫ್ಲೀಟ್ ಮಾಲೀಕರು, ಉದ್ಯಮದ ಪ್ರಮುಖರು, ಪಾಲುದಾರರು ಭಾಗವಹಿಸಿದ್ದರು.

ದೇಶದ ಅತಿ ದೊಡ್ಡ ಮತ್ತು ಅತ್ಯಂತ ಗೌರವಾನ್ವಿತ ಲಾಜಿಸ್ಟಿಕ್ಸ್ ಸೇವಾ ಪೂರೈಕೆದಾರರೆಂಬ ಹೆಗ್ಗಳಿಕೆಗೆ ವಿಆರ್‌ಎಲ್ ಲಾಜಿಸ್ಟಿಕ್ಸ್ ಪಾತ್ರವಾಗಲು ಡಾ. ಆನಂದ ಸಂಕೇಶ್ವರ ಅವರ ನಾಯಕತ್ವವೇ ಕಾರಣವೆಂದು ಗುರುತಿಸಲಾಗಿದೆ. ಅವರ ಹೊಸ ವಿಧಾನ ಮತ್ತು ಸುರಕ್ಷತೆಯ ಉನ್ನತ ಗುಣಮಟ್ಟ, ದಕ್ಷತೆ ಮತ್ತು ಸುಸ್ಥಿರತೆ ಮಾನದಂಡಗಳನ್ನು ಪರಿಗಣಿಸಿ ಪ್ರಶಸ್ತಿ ನೀಡಲಾಗಿದೆ.

ಪ್ರಶಸ್ತಿ ಸ್ವೀಕರಿಸಿದ ಡಾ. ಆನಂದ ಸಂಕೇಶ್ವರ ಮಾತನಾಡಿ, ಲಾಜಿಸ್ಟಿಕ್ಸ್‌ನ ಯಶಸ್ಸಿಗೆ ತಮ್ಮ ತಂಡ ಹಾಗೂ ತಂದೆ ಡಾ. ವಿಜಯ ಸಂಕೇಶ್ವರರ ಮಾರ್ಗದರ್ಶನ ಕಾರಣವಾಗಿದೆ. ಜೆಕೆ ಟೈರ್ ಕಂಪನಿಯ ಪಾತ್ರ ಸೇರಿ ಅಸಂಖ್ಯಾತ ಪಾಲುದಾರರು ಮತ್ತು ಗ್ರಾಹಕರ ನಂಬಿಕೆಯನ್ನು ಮರೆಯಲು ಸಾಧ್ಯವಿಲ್ಲ ಎಂದು ಹೇಳಿದರು.

ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಜೆಕೆ ಟೈರ್‌ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಡಾ. ರಘುಪತಿ ಸಿಂಘಾನಿಯಾ ಮಾತನಾಡಿ, ಕಳೆದ ಎರಡು ದಶಕಗಳಲ್ಲಿ ಜೆಕೆ ಟೈರ್ ಭಾರತದ ಲಾಜಿಸ್ಟಿಕ್ಸ್ಣಾಟಿಜಜಪಿಟಿಜಜ ವಲಯದ ಕಾರ್ಯಾಚರಣೆಯ ದಕ್ಷತೆ ಮತ್ತು ಸುರಕ್ಷತೆಯನ್ನು ಹೆಚ್ಚಿಸುವ ಬದ್ಧತೆಯೊಂದಿಗೆ ಟೈರ್ ತಂತ್ರಜ್ಞಾನ ಮತ್ತು ಫ್ಲೀಟ್ ನಿರ್ವಹಣೆಯಲ್ಲಿ ಪ್ರಗತಿಯನ್ನು ಸಾಧಿಸಿದೆ. ಇಂದು ಈ ಉದ್ಯಮವನ್ನು ಪರಿವರ್ತಿಸಲು ಸಹಾಯ ಮಾಡಿದ ವ್ಯಕ್ತಿಗಳ ಸಾಧನೆಗಳನ್ನು ಗುರುತಿಸಿ ಗೌರವಿಸುತ್ತಿದ್ದೇವೆ. ಅವರಲ್ಲಿ ಡಾ. ಆನಂದ ಸಂಕೇಶ್ವರ ಅಗ್ರಗಣ್ಯರು. ಲಾಜಿಸ್ಟಿಕ್ಸ್ ಕ್ಷೇತ್ರದಲ್ಲಿ ಅವರ ಕೊಡುಗೆ ಅನನ್ಯ ಎಂದರು.

ಜೆಕೆ ಟೈರ್ ಕಂಪನಿ ಇತ್ತೀಚೆಗೆ ಸಿಂಗಾಪುರದಲ್ಲಿ ಆಯೋಜಿಸಿದ್ದ ಉನ್ನತ ಮಟ್ಟದ ಸಮ್ಮೇಳನದಲ್ಲಿ ವಿಆರ್‌ಎಲ್ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕರಾದ

ಡಾ. ಆನಂದ ಸಂಕೇಶ್ವರ ಅವರಿಗೆ ವರ್ಷದ ಲಾಜಿಸ್ಟಿಕ್ ಐಕಾನ್ ಪ್ರಶಸ್ತಿ ನೀಡಿ ಗೌರವಿಸಿತು. ಜೆಕೆ ಟೈರ್‌ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಡಾ. ರಘುಪತಿ ಸಿಂಘಾನಿಯಾ,

ಪ್ರಮುಖರು ಇದ್ದರು.

# ಕರಾಟೆಯಲ್ಲಿ ಶ್ರೀ ಶ್ರೀನಿವಾಸ ಶಾಲೆಯ ಸಂಪತ್ತಗೆ ಚಿನ್ನ



**ಮೂಡಲಗಿ** : ನಗರದ ಶ್ರೀ ಶ್ರೀನಿವಾಸ ಶಾಲೆಯ ವಿದ್ಯಾರ್ಥಿಗಳು ಇತ್ತೀಚೆಗೆ ಹುಬ್ಬಳ್ಳಿಯಲ್ಲಿ 3 ದಿನಗಳ ಕಾಲ ನಡೆದ ಅಂತರಾಷ್ಟ್ರೀಯ ಮಟ್ಟದ ಕರಾಟೆ ಪಂದ್ಯಾವಳಿಯಲ್ಲಿ ವಿವಿಧ ರಾಜ್ಯಗಳಿಂದ ಸುಮಾರು 2500 ಕರಾಟೆ ಪಟುಗಳು ಭಾಗವಹಿಸಿದರು. ಅದರಲ್ಲಿ ನಮ್ಮ ಶಾಲೆಯ ವಿದ್ಯಾರ್ಥಿಗಳು ಅತ್ಯೂತ್ತಮ ಸಾಧನೆಗೈದು ಶಾಲೆಗೆ ಹಾಗೂ ಮೂಡಲಗಿ ನಗರಕ್ಕೆ ಹೆಸರನ್ನು ತಂದಿರುವದು ನಮಗೆಲ್ಲರಿಗೂ ಹೆಮ್ಮೆಯ ವಿಷಯ. ಶ್ರೀ ಶ್ರೀನಿವಾಸ ಶಾಲೆಯ ಅಧ್ಯಕ್ಷ ಡಾ.ರಂಗಣ್ಣ ಸೋನವಾಲ್ಕರ ತೀಳಿಸಿದ್ದಾರೆ, ವಿದ್ಯಾರ್ಥಿ ಸಂಪತ್ತ ಗದಾಡಿ ಕುಮಿಥೆಯಲ್ಲಿ ಚಿನ್ನದ ಪದಕದೊಂದಿಗೆ ಪ್ರಥಮ ಸ್ಥಾನ ಮತ್ತು ಕಥಾ ವಿಭಾಗದಲ್ಲಿ ತೃತೀಯ,

ಮೂಸಾ ನದಾಫ್ ವಿದ್ಯಾರ್ಥಿಯು ಕಥಾ ಪ್ರಥಮ ಹಾಗೂ ಕುಮಿಥೆಯಲ್ಲಿ ತೃತೀಯ ಸ್ಥಾನ ಪಡೆದಿದ್ದಾರೆ, ಅದೇ ರೀತಿಯಾಗಿ ಸಂಕೇತ ಕಾಪಶಿ ಕಥಾದಲ್ಲಿ ದ್ವಿತೀಯ ಕುಮಿಥೆಯಲ್ಲಿ ತೃತೀಯ ಸ್ಥಾನ ಹಾಗೂ ಅಮೃತಾ ರೆಡ್ಡಿ ಕಥಾದಲ್ಲಿ ದ್ವಿತೀಯ ಸ್ಥಾನ ಮತ್ತು ನಿದಾ ಅಂಡಗಿ ವಿದ್ಯಾರ್ಥಿಯು ಕಥಾದಲ್ಲಿ ತೃತೀಯ, ಕುಮಿಥೆಯಲ್ಲಿ ತೃತೀಯ, ಕುಮಿಥೆಯಲ್ಲಿಯೂ ತೃತೀಯ ಹಾಗೆಯೇ ಸಾದ್ವಿ, ಉಪ್ಪಾರ ಕಥಾ ವಿಭಾಗದಲ್ಲಿ ತೃತೀಯ ಸ್ಥಾನ ಪಡೆದಿದ್ದಾಳೆ. ರಿಜ್ವಾನ್ ಪಟೇಲ್ ವಿದ್ಯಾರ್ಥಿಯೂ ಕಥಾದಲ್ಲಿ ತೃತೀಯ ಸ್ಥಾನ ಪಡೆದಿದ್ದಾರೆ. ಒಟ್ಟು ಎರಡು ಚಿನ್ನದ ಪದಕಗಳು, ಮೂರು ಬೆಳ್ಳಿ ಮತ್ತು ಏಳು ಕಂಚಿನ ಪದಕಗಳನ್ನು ಮುಡಿಗೇರಿಸಿಕೊಂಡಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಶಾಲೆಯ ಕಾರ್ಯಾಧ್ಯಕ್ಷ ವೆಂಕಟೇಶ ಪಾಟೀಲ, ಶಾಲೆಯ ಪ್ರಾಂಶುಪಾಲ ಶಂಕರಯ್ಯ ಮಠಪತಿ, ಹಾಗೂ ಶಾಲಾ ಸಂಯೋಜಕ ಅನೀಲ ಚಿಕ್ಕೂರ. ಕರಾಟೆ ತರಬೇತಿದಾರಸಂಜೀವಕುಮಾರ ಹುಲಗಬಾಳಿ ಹಾಗೂ ಶಾಲಾ ಸರ್ವ ಸಿಬ್ಬಂದಿ ವರ್ಗ ಹರ್ಷ ವ್ಯಕ್ತಪಡಿಸಿ ಮಕ್ಕಳನ್ನು ಪ್ರಶಂಶಿಸಿದ್ದಾರೆ.

# ಉಪ್ಪಾರ ಓಣಿ ಶ್ರೀ ಗಜಾನನ ಗೆಳೆಯರ ಬಳಗದಿಂದ ಅಪ್ಪು ಸಂಸ್ಮರಣೆ: ನುಡಿನಮನ




**ಗಂಗಾವತಿ** : ನಗರದ ಶ್ರೀ ಭಗೀರಥ ಸರ್ಕಲ್ ಬಳಿ ಇರುವ ಉಪ್ಪಾರ ಓಣಿಯಲ್ಲಿ ಶ್ರೀ ಗಜಾನನ ಗೆಳೆಯರ ಬಳಗದಿಂದ ಅಭಿಮಾನಿಗಳ ಪ್ರೀತಿಯ ದೇವರು ಅಪ್ಪು ಅವರ ಮೂರನೇ ಸಂಸ್ಮರಣೆ, ನುಡಿನಮನ ಕಾರ್ಯಕ್ರಮವು ಗೀತಾಗಾಯನ, ನೃತ್ಯ, ಪೌರಾಣಿಕ ನಾಟಕಗಳ ಸಂಭಾಷಣೆಗಳ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಡಾ. ಪುನೀತ್ ರಾಜಕುಮಾರ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು ಬಳಿಕ ಮೇಣದ ಬತ್ತಿ ಬೆಳಗಿಸಿ ಅಪ್ಪುಗೆ ಭಾವಪೂರ್ಣ ನಮನ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದ ರೇವಣ ಸಿದ್ದಯ್ಯತಾತನವರು ಮಾತನಾಡಿ, ಇನ್ನೊಬ್ಬರ ಕಷ್ಟ ಅರಿತು ಅವರಿಗೆ ಸಹಾಯ ಹಸ್ತ ಚಾಚುವವನೆ ದೇವರು ಈ ನಿಟ್ಟನಲ್ಲಿ ಅಪ್ಪು ಅವರು ಅನೇಕ ಅನಾಥಾಶ್ರಮಗಳು, ಶಾಲೆಗಳು, ವೃದ್ಧಾಶ್ರಮಗಳು ಸೇರಿದಂತೆ ಬಡ ಸಮುದಾಯದ ಅನೇಕರಿಗೆ ಸಹಾಯ ಹಸ್ತ ಚಾಚಿ ತಮ್ಮ ವ್ಯಕ್ತಿತ್ವದ ಮೂಲಕ ದೈವತ್ವ ಸ್ವರೂಪ ಪಡೆದರು. ಅವರಿಗಾಗಿ ದೇವಾಲಯಗಳನ್ನು ನಿರ್ಮಿಸಿ ಪೂಜಿಸಲಾಗುತ್ತಿದೆ ಎಂದರು. ಚಲನಚಿತ್ರ ನಟ ನಾಗರಾಜ್ ಇಂಗಳಗಿ ಶ್ರೀ ವಿಘ್ನೇಶ್ವರನ ಉತ್ಸವವನ್ನು ಅದ್ದೂರಿಯಾಗಿ ಮಾಡುವುದರ ಜೊತೆಗೆ ಅಪ್ಪು ಕಾರ್ಯಕ್ರಮವನ್ನು ಆಚರಿಸುತ್ತಿರುವುದು ಮುಖ್ಯಸ್ಥರಾದ ಮುಕ್ಕಣ್ಣ ಮಾನಳ್ಳಿ, ರಾಜಪ್ಪ ಹುಲಿಗಿ ಹಾಗು ಗೌಳಿ ಮಾಣಿಕಪ್ಪ ಇವರ ಬದ್ಧತೆಗೆ ಸಾಕ್ಷಿ ಎಂದರು.

ಈ ಸಂದರ್ಭದಲ್ಲಿ ವಿಐಪಿ ಮೆಲೋಡಿಸ್‌ನಿಂದ ಸಂಗೀತ ರಸಸಂಜೆ ಕಾರ್ಯಕ್ರಮವೂ ಜರುಗಿ–ತು. ಗಾಯಕ, ಮೆಲೋಡಿಸ್ ಮಾಲಿಕ ಪಂಪಾಪತಿ ಇಂಗಳಗಿ ಹಾಗು ರಂಗಭೂಮಿ ಕಲಾವಿದ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಗಂಗಾವತಿ ತಾಲೂಕಾ ಅಧ್ಯಕ್ಷ ನಾಗರಾಜ್ ಇಂಗಳಗಿಯವರನ್ನು ಈ ಸಂದರ್ಭದಲ್ಲಿ ಗೆಳೆಯರ ಬಳಗದಿಂದ ಆತ್ಮೀಯವಾಗಿ ಸನ್ಮಾನಿಸಲಾಯಿತು. ಷಣ್ಮುಖ ಸ್ವಾಮಿ ವಕೀಳರು ಕವನ ವಾಚನ ಮಾಡಿದರು.

ಅಕಾಲಿಕ ಮರಣಹೊಂದಿದ ಶಿವಪುರದ ನವೀನ್ ಕುಮಾರ್ ವರಗಪ್ಪನವರ್ ಹಾಗು ಸಿಂಧನೂರಿನ ಗಾಯಕ ದಿವಂಗತ ರುದ್ರಮುನಿ ಸ್ವಾಮಿಯವರ ಅಗಲೀಕೆಗೆ ಈವೇಳೆ ಮೌನಾಚರಣೆ ಸಲ್ಲಿಸಲಾಯಿತು.

ವೇದಿಕೆಯಲ್ಲಿ ಕಾರ್ಯಕ್ರಮದ ರೋವಾರಿ ಹಾಗು ಗೆಳೆಯರ ಬಳಗದ ಪ್ರಮುಖರಾದ ಮುಕ್ಕಣ್ಣ ಮಾನಳ್ಳಿ, ರಾಜಪ್ಪ ಹುಲಿಗಿ, ಮಾಣಿಕಪ್ಪ ಗೌಳಿ, ಸಿದ್ರಾಮ್ ಗೌಳಿ, ಮಂಜುನಾಥ ಬುಕ್ಕಸಾಗರ, ಕೊಟ್ರಯ್ಯಸ್ವಾಮಿ, ಚನ್ನಪ್ಪ ವಣಗೇರಿ, ಮೌನೇಶ್ ಇಂಗಳಗಿ, ಮಂಜುನಾಥ್ ಮಡಿವಾಳರು, ಖಾಜಾಸಾಬ್, ಈರಣ್ಣ ಮಡಿವಾಳರು ಇತರರಿದ್ದರು. ಅನೇಕ ಮಕ್ಕಳು ನೃತ್ಯ ಪ್ರದರ್ಶಿಸಿದರು.

ಗಾಯಕರಾದ ಪಂಪಾಪತಿ ಇಂಗಳಗಿ ಹಾಗು ಮಧುಶ್ರೀ, ಗುರುಪ್ರಸಾದ ಬೆಂಗಳೂರು, ಪೊಲೀಸ್ ಇಲಾಖೆಯ ಗೌಳಿ ಸುಬ್ರಮಣ್ಯ, ನಗರಸಭೆಯ ಷಣ್ಮುಖಪ್ಪ, ಅಮರೇಗೌಡ ಜಿನ್ನೂರು, ವೀರಭದ್ರಪ್ಪ, ವೀರೇಶ್‌ಸ್ವಾಮಿ ಚೂಡಾಮಣಿ, ಶ್ರೀನಿವಾಸ್ ಮರಾಠಿ ಸೇರಿದಂತೆ ಹವ್ಯಾಸಿ ಗಾಯಕರು ತಮ್ಮ ಗಾಯನದ ಮೂಲಕ ಜನಮನ ರಂಜಿಸಿದರು,

## ನವನಗರದ ಬಸ್ ನಿಲ್ದಾಣದಲ್ಲಿ ದೀಪ ಸಂಜೀವಿನಿ ಕಾರ್ಯಕ್ರಮ

# ದೀಪ ಸಂಜೀವಿನಿ ಕಾರ್ಯಕ್ರಮಕ್ಕೆ ಡಿಸಿ, ಸಿಇಓ ಚಾಲನೆ





**ಬಾಗಲಕೋಟೆ**:ಜಿಲ್ಲಾಪಂಚಾಯತ್‌ಹಾಗೂ ತಾಲೂಕು ಪಂಚಾಯತ್ ಸಹಯೋಗದಲ್ಲಿ ನವನಗರ ಬಸ್ ನಿಲ್ದಾಣದಲ್ಲಿ ಹಮ್ಮಿಕೊಂಡ ದೀಪ ಸಂಜೀವಿನಿ ಕಾರ್ಯಕ್ರಮಕ್ಕೆ ಜಿಲ್ಲಾಧಿಕಾರಿ ಜಾನಕಿ ಕೆ.ಎಮ್ ಹಾಗೂ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ್ ಕುರೇರ ಜಂಟಿಯಾಗಿ ಉದ್ಘಾಟಿಸಿದರು.

ಜಿಲ್ಲಾಧಿಕಾರಿಜಾನಕಿಕೆ.ಎಂಮಾತನಾಡಿಎನ್. ಆರ್.ಎಲ್.ಎಂ ಯೋಜನೆ ಮಹಿಳೆಯರು ಸ್ವಾವಲಂಬನೆಯಾಗಿ ಬದಕಲು ದಾರಿ ದೀಪವಾಗಿದೆ. ತಾವೇ ಉತ್ಪಾದಿಸಿದ ವಸ್ತುಗಳನ್ನು ಮಾರು ಮಳಿಗೆಯನ್ನು ಸಹ ಜಿಲ್ಲಾ ಪಂಚಾಯತಿಯವರು ನಿರ್ಮಿಸಿಕೊಟ್ಟಿದ್ದಾರೆ ಇದರಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಜಿ.ಪಂ ಸಿಇಓ ಮಾತನಾಡಿ ಈ ಯೋಜನೆಯಡಿ ಮಹಿಳೆಯರು ಸ್ವ–ಉದ್ಯೋಗ ಚಟುವಟಿಕೆ ಕೈಗೊಳ್ಳಲು ಜಿ.ಪಿ.ಎಲ್.ಎಫ್ ಮೂಲಕ ಸಮುದಾಯ ಬಂಡವಾಳ ನಿಧಿ, ಸುತ್ತುನಿಧಿ, ಬೀಜಧನ ಹಾಗೂ ಬ್ಯಾಂಕ ಮೂಲಕ ಸಾಲ ನೀಡಲಾಗುತ್ತಿದೆ ಎಂದು ತಿಳಿಸಿದರು.

ಸ್ವ–ಸಹಾಯ ಗುಂಪಿನ ಮಹಿಳೆಯರು ತಯಾರಿಸಿದ ಮಣ್ಣಿನ ಹಣತೆಗಳು & ಎತ್ತುಗಳ ಮೂರ್ತಿಗಳು, ಅಗರಬತ್ತಿ, ಕರ್ಪೂರ, ಊಟದ ತಟ್ಟೆ, ರೊಟ್ಟಿ, ಮುತ್ತಿನ ದಂಡೆ, ಮುತ್ತಿನ ತೆನೆ, ಪಾಪಡ್, ವಿವಿಧ ವಿನ್ಯಾಸದ ಕಾಟನ್ ಹಾಗೂ ಜ್ಯೂಟ್ ಬ್ಯಾಗ & ಪರ್ಸಗಳು, ಇಳಕಲ್ ಹಾಗೂ ರಬಕವಿ ಬನಹಟ್ಟಿ ಸೀರೆಗಳ ಮಾರಾಟಕ್ಕೆ ಅವಕಾಶಕಲ್ಪಿಸಲಾಗಿದ್ದು, ಅವುಗಳನ್ನು ವೀಕ್ಷಿಸುವದರು.

ಕಾರ್ಯಕ್ರಮದಲ್ಲಿ ಜಿ.ಪಂ ಯೋಜನಾ ನಿರ್ದೇಶಕರು ಡಾ.ಪುನೀತ್ ಬಿ.ಆರ್, ಸಹಾಯಕ ಯೋಜನಾಧಿಕಾರಿ ಭೀಮಪ್ಪ ತಳವಾರ ಹಾಗೂ ಬಾಗಲಕೋಟೆ ತಾಲೂಕ ಕಾರ್ಯನಿರ್ವಾಹಕ ಅಧಿಕಾರಿ ಸುಭಾಸ್ ಸಂಪಗಾಂವಿ ಮತ್ತು ಜಿಲ್ಲಾ ಅಭಿಯಾನ ನಿರ್ವಹಣಾ ಘಟಕದ ಜಿಲ್ಲಾ ಸಿಬ್ಬಂದಿಗಳು ಹಾಗೂ ತಾಲೂಕಿನ ಸಿಬ್ಬಂದಿಗಳು ಹಾಗೂ ಸ್ವ ಸಹಾಯ ಸಂಘದ ಸದಸ್ಯರು ಉಪಸ್ಥಿತ–ರಿದ್ದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State